ದೆಹಲಿ ಕರ್ನಾಟಕ ಸಂಘದ

# ಅಭಿಮತ

ಫೆಬ್ರವರಿ 2021
ಬೆಲೆ ರೂ. 1



## ರಾಜಪಥದಲ್ಲಿ ಕಂಡ ಕರ್ನಾಟಕದ ಗತ ವೈಭವ



ಡಾ. ದೊಡ್ಡರಂಗೇಗೌಡರಿಗೆ ಕನ್ನಡ ಸಾರಥ್ಯ



ಡಾ. ಎಚ್.ಎಸ್. ಶಿವಪ್ರಕಾಶ್ ಅವರಿಗೆ ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ

# ಸಂಘದಲ್ಲಿ ಗಣರಾಜ್ಯೋತ್ಸವ



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 26.01.2021ರಂದು ನಡೆದ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಧ್ವಜಾರೋಹಣ ಮಾಡಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ರಾಧಾಕೃಷ್ಣ, ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಸವಿತಾ ನೆಲ್ಲಿ ಮತ್ತು ಸಂಘದ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಭಾಗವಹಿಸಿದರು.





ಧಾರವಾಡದ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ದಿನಾಂಕ 31.01.2021ರಂದು ಖ್ಯಾತ ಕವಿ, ನಾಟಕಕಾರ ಡಾ. ಎಚ್.ಎಸ್. ಶಿವಪ್ರಕಾಶ್ ಅವರಿಗೆ 2021ನೇ ಸಾಲಿನ "ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ" ನೀಡಿ ಗೌರವಿಸಿತು. ಈ ಸಮಾರಂಭದಲ್ಲಿ ಭಾಗವಹಿಸಿದ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಜಮುನಾ ಸಿ. ಮಠದ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯ ಚೆನ್ನು ಎಸ್. ಮಠದ ಅವರು ಡಾ. ಎಚ್.ಎಸ್. ಶಿವಪ್ರಕಾಶ್ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಅನಂತರಾಮು ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ

ಸಂಪುಟ 31 । ಸಂಚಿಕೆ 5
ಫೆಬ್ರವರಿ 2021

## ಸಂಪಾದಕೀಯ

# ಕನ್ನಡ ತೇರನೆಳೆಯುವ ಕಾಲ

ಮತ್ತೆ ಕನ್ನಡ ಜಾತ್ರೆ ಬಂದಿದೆ. ಹಾವೇರಿಯಲ್ಲಿ ಮುಂದಿನ ತಿಂಗಳು ಮೂರು ದಿನಗಳ ಕಾಲ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವ ಸಾಧ್ಯತೆ ಇದೆ. ಅದು ಈ ತಿಂಗಳ ಕೊನೆಯಲ್ಲಿ ನಿಗದಿಯಾಗಿತ್ತು. ತಡವಾದರೂ ಇದು ಕನ್ನಡ ತೇರನೆಳೆಯುವ ಕಾಲ. ಕನ್ನಡ ತೇರನೆಳೆಯುವುದು ಸಾಂಕೇತಿಕವಾಗದೆ ಅದು ಸಮಗ್ರ ಕನ್ನಡದ ಬೆಳವಣಿಗೆಗೆ ಉತ್ತೇಜನ ನೀಡುವ ವೇದಿಕೆಯಾಗಬೇಕು. ಮತ್ತು ಅಲ್ಲಿ ಅರ್ಥಪೂರ್ಣ ನುಡಿ ಹಬ್ಬ ಜರಗುವುದು ಅಪೇಕ್ಷಣೀಯ.

ಈ ಬಾರಿ ಕನ್ನಡದ ಹಿರಿಯ ಕವಿ ಪದ್ಮಶ್ರೀ ಡಾ. ದೊಡ್ಡರಂಗೇಗೌಡರು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಸಂತಸದ ವಿಷಯ. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರ ಕೊಡುಗೆಗಳನ್ನು ನೀಡಿರುವ ದೊಡ್ಡರಂಗೇಗೌಡರು ಅರ್ಹವಾಗಿ ಈ ಮನ್ನಣೆಗೆ ಪಾತ್ರರಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದೊಂದಿಗೆ ಆತ್ಮೀಯ ಸಂಬಂಧವನ್ನು ಹೊಂದಿರುವ ದೊಡ್ಡರಂಗೇಗೌಡರು 'ಸಂಘ ನಮ್ಮೆಯ ತವರುಮನೆಯಂತೆ' ಎಂದು ಸ್ಮರಿಸಿದ್ದರು.

ಕವಿಯಾಗಿ ತಮ್ಮ ಜಾನಪದ ಶೈಲಿಯ ಹಾಡುಗಳಿಗೆ ಜನಪ್ರಿಯರಾಗಿರುವ ದೊಡ್ಡರಂಗೇಗೌಡರು ಐನ್ನೂರಕ್ಕೂ ಹೆಚ್ಚು ಚಲನಚಿತ್ರಗೀತೆಗಳನ್ನು ರಚಿಸಿದ್ದಾರೆ. 'ಜನ್ಮ ನೀಡಿದ ಭೂತಾಯಿಯ ನಾ ಹೇಗೆ ತಾನೆ ಮರೆಯಲಿ', 'ನಮ್ಮೂರ ಮಂದಾರ ಹೂವೆ', 'ನೋಟದಾಗೆ ನಗೆಯಾ ಮೀಟಿ' ಮೊದಲಾದ ಅವರ ಗೀತೆಗಳು ಜನಮಾನಸದಲ್ಲಿ ಚಿರನೂತನವಾಗಿ ಹಸಿರಾಗಿದೆ. ಅನೇಕ ಭಾವಗೀತೆಗಳನ್ನು ರಚಿಸಿರುವ ದೊಡ್ಡರಂಗೇಗೌಡರು ನಲ್ವತ್ತೆಂಟು ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. ಇದಲ್ಲದೆ ವಿಮರ್ಶೆ, ಪ್ರಬಂಧ ಸೇರಿದಂತೆ ಮೂವತ್ತು ಗದ್ಯಕೃತಿಗಳನ್ನು ಬರೆದಿದ್ದಾರೆ. ಗಾಯಕರಾಗಿ, ಸಂಭಾಷಣೆಕಾರನಾಗಿಯೂ ಅವರು ಕೊಡುಗೆ ನೀಡಿದ್ದಾರೆ. ಡಾ. ಗೌಡರು ವಿಧಾನಪರಿಷತ್ ಸದಸ್ಯರಾಗಿಯೂ ನಾಡಿನ ಬೆಳವಣಿಗೆಗೆ ದುಡಿದಿದ್ದಾರೆ.

ಡಾ. ದೊಡ್ಡರಂಗೇಗೌಡರ ಹಿಂದಿ ಭಾಷೆಯ ಕುರಿತ ಹೇಳಿಕೆ ಈಚೆಗೆ ವಿವಾದಕ್ಕೂ ಕಾರಣವಾಗಿತ್ತು. ನಂತರ ಅವರು 'ನಾನು ಕನ್ನಡವಲ್ಲದೆ ಬೇರೆ ಯಾವ ಭಾಷೆಯನ್ನೂ ತಲೆಯ ಮೇಲೆ ಹೊತ್ತು ತಿರುಗುವುದಿಲ್ಲ' ಎಂದು ಮಾರ್ಮಿಕವಾಗಿ ಹೇಳಿದ್ದರು. ತಮ್ಮ ಕಾವ್ಯ ಮತ್ತು ದೈನಂದಿನ ಬದುಕಿನಲ್ಲಿ ಸದಾ ಕಾಲ ಕನ್ನಡ ಭಾಷೆ ಮತ್ತು ತಾಯಿ ನೆಲದ ಪ್ರೀತಿಯನ್ನು ವ್ಯಕ್ತಪಡಿಸುವ ಹಿರಿಯ ಕವಿ ದೊಡ್ಡರಂಗೇಗೌಡರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಜರಗಲಿ ಎಂದು ನಾವು ಆಶಿಸುತ್ತೇವೆ. ಡಾ. ದೊಡ್ಡರಂಗೇಗೌಡರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು.

ಈ ಹಿಂದೆ 'ನಿನ್ನ ರೂಪು ಎದೆಯ ಕಲಕಿ' ಎಂಬ ಸಂಗೀತಮಯ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘ ಆಯೋಜಿಸಿತ್ತು. ಸ್ವತಃ ಕವಿ ದೊಡ್ಡರಂಗೇಗೌಡರ ಸಮ್ಮುಖದಲ್ಲಿ ಜರಗಿದ ಆ ಕಾರ್ಯಕ್ರಮದ ಮೂಲಕ ಅವರಿಗೆ ಗೌರವ ಸಲ್ಲಿಸಲಾಗಿತ್ತು. ಈಚೆಗೆ ಅವರ ಸಾಹಿತ್ಯದ ಹಾಡುಗಳ ಸಂಗೀತ ಸಂಭ್ರಮವನ್ನು ಸಂಘ ಆಯೋಜಿಸಿತ್ತು. ಹೀಗೆ ದೊಡ್ಡರಂಗೇಗೌಡರು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಚಟುವಟಿಕೆಯ ಭಾಗವಾಗಿರುವುದು ನಮ್ಮ ಹೆಮ್ಮೆಗೆ ಕಾರಣವಾಗಿದೆ.

ಇದರೊಂದಿಗೆ ಈಚೆಗೆ ದೆಹಲಿಯಲ್ಲೇ ಸುದೀರ್ಘ ಕಾಲ ನೆಲೆಸಿರುವ ಹಿರಿಯ ಕವಿ, ನಾಟಕಕಾರ ಡಾ. ಎಚ್.ಎಸ್. ಶಿವಪ್ರಕಾಶ್ ಅವರಿಗೆ 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ'ಯ ಗೌರವ ಸಂದಿರುವುದು ನಮ್ಮ ಸಂತಸವನ್ನು ಇಮ್ಮಡಿಗೊಳಿಸಿದೆ. ಡಾ. ಶಿವಪ್ರಕಾಶ್ ಅವರಿಗೂ ನಮ್ಮ ಹಾರ್ದಿಕ ಅಭಿನಂದನೆಗಳು. ಮುಂದಿನ ದಿನಗಳಲ್ಲಿ ಅವರಿಗೆ ಇನ್ನೂ ಹೆಚ್ಚಿನ ಸಾಹಿತ್ಯ ಮನ್ನಣೆ ಪ್ರಾಪ್ತಿಯಾಗಲಿ ಎಂಬುದು ನಮ್ಮ ಮನದಾಳದ ಹಾರೈಕೆ.

ಈ ಹಿಂದೆ 2008ರಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘಕ್ಕೂ 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ'ಯ ಗೌರವ ಲಭಿಸಿದ್ದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಮೂಲಕ ಧಾರವಾಡದ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಗೌರವ ದೆಹಲಿ ಕನ್ನಡಿಗರಿಗೆ ಎರಡನೇ ಬಾರಿ ಲಭಿಸಿರುವುದು ಅತ್ಯಂತ ಹರ್ಷದ ವಿಚಾರ.

ಸಾಹಿತ್ಯ ಸಮಾಜದ ಹೃದಯವಾಣಿ ಎಂದು ಹಿರಿಯ ಕವಿ, ನಿಕಟಪೂರ್ವ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ಎಚ್.ಎಸ್. ವೆಂಕಟೇಶ ಮೂರ್ತಿ ಅವರು ಹೇಳಿದ್ದು ಗಮನಾರ್ಹ. ಇದು ಸಾಹಿತ್ಯದ ಮಹತ್ವವನ್ನು ಸಾರಿ ಹೇಳಿದೆ. ಡಾ. ದೊಡ್ಡರಂಗೇಗೌಡರ ಅಧ್ಯಕ್ಷತೆಯ ಈ ಬಾರಿಯ ಸಾಹಿತ್ಯ ಸಮ್ಮೇಳನ ಅರ್ಥಪೂರ್ಣವಾಗಿ ಜರಗಲಿ. ಮಹಾ ನುಡಿಹಬ್ಬಕ್ಕೆ ನಮ್ಮೆಲ್ಲರ ಶುಭ ಹಾರೈಕೆಗಳು.

ಡಾ. ಅವನೀಂದ್ರನಾಥ್ ರಾವ್

## ನಮ್ಮನಮ್ಮೊಳಗೆ

# ಮುಟ್ಟಿಯೊಳಕ್ಕೆ ಸಿಲುಕಿತೆ ಕೊರೊನಾ

ನಾವು ಹೊಸ ವರ್ಷದಲ್ಲಿ ಕಾಲಿಟ್ಟು ಈಗ ತಿಂಗಳು ಕಳೆದು ಹೋಯಿತು. ಇನ್ನೊಂದು ತಿಂಗಳು ಕಳೆದರೆ ನಮ್ಮೆಲ್ಲರ ಕೊರೊನಾದ ಜೊತೆಗಿನ ಜಟಾಪಟಿ ಪ್ರಾರಂಭವಾಗಿ ಒಂದು ವರ್ಷವೆ ಆಗಿ ಹೋಗಲಿದೆ. ಈ ಒಂದು ವರ್ಷದಲ್ಲಿ ನಾವು ಮನೆಗುಬ್ಬಿಗಳ ಹಾಗೆ ನೂರಾರು ದಿನ ಮನೆಯ ಗೂಡಿನಲ್ಲಿ ಕುಳಿತರೂ ಯಾವ ಮೂಲೆಯಿಂದ ಈ ಕೊರೊನಾ ನಮ್ಮನ್ನು ಆವರಿಸಿ ಬಿಡಬಹುದು ಎಂಬ ಆತಂಕದಲ್ಲೆ ಇದ್ದೆವು. ನಮ್ಮಲ್ಲಿ ಹಲವರಿಗೆ ಆದದ್ದು ಹಾಗೆಯೇ. ಎಲ್ಲ ಬಗೆಯ ಮುಂಜಾಗ್ರತೆಗಳನ್ನು ತೆಗೆದುಕೊಂಡರೂ ಈ ಕೊರೊನಾದ ಹಾವಳಿ ಯಾವುದೊ ಬಾಗಿಲಿನಿಂದ ನಮ್ಮಮನೆಗಳ ಬಾಗಿಲು ದಾಟಿ ಒಳಬಂದದ್ದು ಆಯಿತು. ಹಾಗೆ ಅದು ಬಂದದ್ದು ಆತಂಕಕ್ಕೆ ಕಾರಣವಾದರೂ ಹತ್ತಾರು ದಿನಗಳಲ್ಲಿ ಮೈಮನಗಳನ್ನು ಬಿಸಿ ಮಾಡಿ, ಉಸಿರನ್ನು ತುಸು ಬಿಗಿ ಮಾಡಿದಂತಾಗಿಸಿ, ಹಾಗೆಯೆ ನಿಧಾನವಾಗಿ ಬಂದಂತೆ ಹೊರಟು ಹೋದರೆ ಯಾರಿಗೂ ತೊಂದರೆಯಿಲ್ಲ. ಆದರೆ ನಮ್ಮಲ್ಲಿ ಕೆಲವರನ್ನು ಈ ಕೊರೊನಾ ತಾನು ಹೊರಡುವ ಮೊದಲು ತನ್ನ ಜೊತೆಗೆ ಕರೆದುಕೊಂಡು ಹೋದದ್ದು ಅದರ ಕರಾಳತೆಯ ಆಳವನ್ನು ತೋರಿಸುತ್ತದೆ. ಈ ಕೊರೊನಾ ತಂಗಾಳಿಯಂತೆ ಸವರಿಕೊಂಡು ಹೋದವರ ಸಂಖ್ಯೆ ನಮ್ಮ ದೇಶದಲ್ಲಿ ಸುಮಾರು ಇಪ್ಪತ್ತು ಕೋಟಿಯೆಂಬುದನ್ನು ಇತ್ತೀಚಿನ ಸರಕಾರದ ಅಂಕಿ ಅಂಶಗಳು ಹೇಳುತ್ತಿವೆ. ನಮ್ಮ ದೇಶದ ಬಹುಪಾಲು ಜನಸಂಖ್ಯೆಗೆ ಕೊರೊನಾ ಅವರನ್ನು ಮುಟ್ಟಿ ಹೋದದ್ದರ ಅರಿವೆ ಆಗಿರಲಿಲ್ಲವೆಂಬುದು ಒಂದು ಬಗೆಯ ಸಂತಸದ ಸಂಗತಿಯಾಗಬೇಕಾಗಿತ್ತು. ಆದರೆ ಇದಕ್ಕೆ ಕಾರಣಗಳನ್ನು ಹುಡುಕುತ್ತ ಹೊರಟರೆ ಅದಕ್ಕೆ ಕೊನೆ ಮೊದಲಿಲ್ಲ. ಬದುಕನ್ನು ಕಟ್ಟಿಕೊಂಡು ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ನಮ್ಮ ದೇಶದ ಬಹುಪಾಲು ಜನಸಮುದಾಯಕ್ಕೆ ಇದ್ದದ್ದನ್ನು ನಾವು ನೆನೆಸಿಕೊಳ್ಳಬೇಕು. ಇವರಲ್ಲಿ ಹೆಚ್ಚಿನವರಿಗೆ ವೈದ್ಯಕೀಯ ಸವಲತ್ತುಗಳು ಮರಿಚೀಕೆಗಳಿದ್ದಂತೆ.

ಈ ಮೇಲೆ ವಿವರಿಸಿದ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಈಗ ಕೊರೊನಾದ ಓಟದ ಓಘಕ್ಕೆ ಒಂದು ಬಗೆಯ ಕಡಿವಾಣ ಬಿದ್ದಂತೆ ತೋರುತ್ತಿದೆ. ದೇಶದಾದ್ಯಂತ ಎಂಟು ಸಾವಿರದಷ್ಟು ಕೊರೊನಾ ಕೇಸುಗಳು ಕಳೆದ ಕೆಲ ದಿನಗಳಿಂದ ದಾಖಲಾಗತೊಡಗಿದ್ದು ಒಂದು ಬಗೆಯ ಸರಾಗದ ಉಸಿರನ್ನು ಮತ್ತು ನಿರಾಳತೆಯ ಅನುಭವವನ್ನು ನೀಡುತ್ತಿವೆ. ಆದರೆ ಇದಕ್ಕೆ ಪಕ್ಕಾಗಿ ನಾವು ಮತ್ತೆ ಎಡವಬಾರದೆಂದು ಪರಿಣಿತರು ಹೇಳುತ್ತಿದ್ದಾರೆ. ಇದನ್ನು ಕೇಳುವ ಸಹನೆಯಾದರೂ ನಮಗಿದೆಯೇ?. ಆಗಲೆ ಜನ ಅಂಗಡಿಮುಗ್ಗಟ್ಟುಗಳಿಗೆ ಎಂದಿನಂತೆ ಲಗ್ಗೆ ಹಾಕುತ್ತಿದ್ದಾರೆ. ಸಂಚಾರ ವ್ಯವಸ್ಥೆಗಳು, ಶಾಲಾಕಾಲೇಜುಗಳು ನಿಧಾನವಾಗಿ ತಮ್ಮ ಬಾಗಿಲುಗಳನ್ನು ತೆರೆಯುವತ್ತ ಅಣಿಯಾಗುತ್ತಿವೆ. ಸಂಸತ್ತು ಈಗ ತನ್ನ ಮುಂಗಡ ಪತ್ರದ ಅಧೀವೇಶನದ ಭರಾಟೆಯಿಲ್ಲಿದೆ. ದೆಹಲಿಯ ಸುತ್ತಮುತ್ತ ಸಾವಿರಾರು ರೈತರು ಎಲ್ಲವನ್ನೂ ಮರೆತವರಂತೆ ತಮ್ಮ ಧರಣಿಯನ್ನು ಮುಂದುವರಿಸಿದ್ದಾರೆ. ಕೆಲವಾರು ರಾಜ್ಯಗಳಲ್ಲಿ ಮುಂಬರುವ ತಿಂಗಳುಗಳಲ್ಲಿ ನಡೆಯಲಿರುವ ಚುನಾವಣೆಗಳಿಗಾಗಿ ರಾಜಕೀಯ ಪಕ್ಷಗಳು ತಮ್ಮ ಅಖಾಡಗಳನ್ನು ತಯಾರಿ ಮಾಡಿಕೊಳ್ಳುವತ್ತ ಕಾರ್ಯಮಗ್ನವಾಗಿವೆ.

ಅತ್ತ ಅಮೆರಿಕೆ ಮತ್ತು ಯುರೋಪಿನಲ್ಲಿ ಕೊರೊನಾದ ಕರಾಳ ನರ್ತನ ಪರಾಕಷ್ಠೆಯನ್ನು ಮುಟ್ಟುತ್ತಿದೆ. ಜಗತ್ತಿನಾದ್ಯಂತ ಹಲವಾರು ದೇಶಗಳು, ನಮ್ಮ ದೇಶವೂ ಸೇರಿದಂತೆ ಈಗ ಕೊರೊನಾದ ಲಸಿಕೆಗಳನ್ನು ನೀಡುವ ಕಾರ್ಯಕ್ರಮಗಳನ್ನು ತರಾತುರಿಯಿಂದ ಹಮ್ಮಿಕೊಳ್ಳುತ್ತಿವೆ. ಈ ಲಸಿಕೆಗಳಿಂದಾಗಿಯಾದರೂ ಕೊರೊನಾವನ್ನು ತಹಬದಿಗೆ ತರಬಹುದೆಂಬ ಆಶಯ ನಮ್ಮೆಲ್ಲರದ್ದು. ಆದರೆ ಈ ಕೊರೊನಾ ವೈರಸ್ ರಕ್ತಬೀಜಾಸುರನಂತೆ ಮತ್ತೆ ಮತ್ತೆ ತನ್ನ ಹೊಸ ರೂಪಾಂತರಗಳಿಂದ ನಮ್ಮನ್ನೆಲ್ಲ ಆವರಿಸುವ ಸಾಧ್ಯತೆಗಳನ್ನು ನಾವು ಕೆಲ ದೇಶಗಳಲ್ಲಿ ಕಂಡಿದ್ದೇವೆ. ಇಲ್ಲಿಯ ತನಕ ಈ ರೂಪಾಂತರಿ ಕೊರೊನಾ ವೈರಸ್ಸು ನಮ್ಮ ದೇಶದಲ್ಲಿ ತನ್ನ ಗಂಟನ್ನು ಬಿಚ್ಚದಂತೆ ನಾವು ಎಚ್ಚರ ವಹಿಸುತ್ತಿದ್ದೇವೆ. ಇನ್ನೂ ಕೆಲ ಕಾಲ ಈ ಎಚ್ಚರದ ಅಗತ್ಯವಿದೆಯೆಂಬುದನ್ನು ಪರಿಣಿತರು ಸಾರಿಸಾರಿ ಹೇಳುತ್ತಿದ್ದಾರೆ.

ನಾವು-ನೀವು, ದೆಹಲಿಯ ಕನ್ನಡಿಗರೆಲ್ಲ ಹೊಸ ವರ್ಷದಲ್ಲಿ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಮತ್ತೆ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳನ್ನು ಆಯೋಜಿಸುವ ಬಗ್ಗೆ ವಿಚಾರ ಮಾಡತೊಡಗಿದ್ದೇವೆ. ಆದರೆ ಈ ಎಲ್ಲ ನಮ್ಮ ನಿಶ್ಚಯಗಳು ಸರಕಾರದ ನೀತಿ ನಿಯಮಾವಳಿಗಳಿಗೆ ಅನುಸಾರವಾಗಿ ಇರಬೇಕಾಗುತ್ತದೆ. ಈಗ ಸರಕಾರ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಕಾರ್ಯಕ್ರಮಗಳ ಜೊತೆಗೆ ಬಯಲುಗಳಲ್ಲಿ ಕ್ರೀಡಾ ಸ್ಪರ್ಧೆಗಳನ್ನು ನಡೆಸಬಹುದೆಂಬುದರ ಮಟ್ಟಿಗೆ ಲಾಕ್‌ಡೌನ್ ಸಡಿಲಗೊಳಿಸಿದಂತೆ ತೋರುತ್ತಿದೆ. ಆದರೆ ಒಂದು ಜಾಗೆಯಲ್ಲಿ ಎಷ್ಟು ಜನ ಸೇರಬಹುದು ಎಂಬುದರ ಬಗ್ಗೆ ಇನ್ನೂ ಸರಿಯಾದ ವಿವರಗಳು ನಮಗೆ ದೊರಕಬೇಕಾಗಿದೆ. ಇದು ಕೇಂದ್ರ ಸರಕಾರದ ಹೊರಡಿಸಿದ ನಿಯಮಾವಳಿಗಳಾದರೆ, ದೆಹಲಿಯ ಸರಕಾರ ಈ ಕುರಿತಾಗಿ ತನ್ನದೆ ಆದ ವಿವರವಾದ ನೀತಿಗಳನ್ನು ಇದಕ್ಕೆ ಪೂರಕವಾಗಿ ಘೋಷಿಸುವುದರ ತನಕ ನಾವು ಕಾಯಬೇಕಾಗಬಹುದೆನೋ?. ಈ ಎಲ್ಲ ನಿಯಮಾವಳಿಗಳು ಕೊರೊನಾದ ಮೂಲಭೂತ ಎಚ್ಚರಗಳನ್ನು ವಹಿಸುವದರ ಬಗ್ಗೆ ಒತ್ತು ಕೊಡುತ್ತವೆ. ಅಂದರೆ ಜನರ ಮಧ್ಯೆ ಜಾಗೆಗಳು ಖಾಲಿಯಿರಬೇಕು. ಐವತ್ತು ಜನರಿಗಿಂತ (ಈಗ ನೂರೊ, ಐದು ನೂರೂ) ಹೆಚ್ಚು ಜನ ಒಂದೆಡೆ ಇರಬಾರದು...ಇತ್ಯಾದಿ ನಿಯಮಾವಳಿಗಳನ್ನು ಗಮನದಲ್ಲಿಟ್ಟುಕೊಂಡು ದೆಹಲಿ ಕರ್ನಾಟಕ ಸಂಘ ತನ್ನ ಮುಂದಿನ ಕಾರ್ಯಕ್ರಮಗಳ ರೂಪರೇಷೇಗಳನ್ನು ತಯಾರಿಸಬೇಕಿದೆ. ಅದಕ್ಕಾಗಿ ಈಗ ಸಂಘದ ಕಾರ್ಯಕಾರಿ ಸಮಿತಿ ಸಭೆ ಸೇರಿ ಈ ಎಲ್ಲ ಸರಕಾರದ ನಿಯಮಗಳನ್ನು ಗಮನಿಸಿಕೊಂಡು ತನ್ನ ನಿರ್ಧಾರವನ್ನು ಕೈಗೊಳ್ಳಬೇಕಿದೆ. ಸದ್ಯ ಸಂಘದ ಎಲ್ಲ ವ್ಯವಸ್ಥೆಗಳು ಈಗ ಎಂದಿನಂತೆ ತಮ್ಮ ಸೇವೆಯನ್ನು ನೀಡುತ್ತಿವೆಯೆಂಬುದನ್ನು ತಮ್ಮೊಂದಿಗೆ ಹಂಚಿಕೊಳ್ಳಲು ನನಗೆ ಸಂತಸವಾಗುತ್ತದೆ. ಪ್ರತಿವರ್ಷದಂತೆ ನಾವು ಜನವರಿ 26 ರಂದು ಧ್ವಜಾರೋಹಣದ ಮೂಲಕ ನಮ್ಮ ಗಣರಾಜ್ಯೋತ್ಸವನ್ನು ಆಚರಿಸಿದೆವು.

ಇತ್ತ ದೆಹಲಿಯ ಚಳಿ ನಿಧಾನವಾಗಿ ತನ್ನ ಪೊರೆಯನ್ನು ಕಳಚಿಕೊಳ್ಳುತ್ತಿದೆ. ಜನವರಿಯಲ್ಲಿ ಬಿಸಿಲನ್ನು ಅಮುಕಿ ಕುಳಿತಿದ್ದ ಮಂಜು, ತುಸು ಮಳೆಗಾಳಿ ಈಗ ನಿಧಾನವಾಗಿ ನೀಲಿ ಆಕಾಶವನ್ನು ತೋರುತ್ತಿದೆ. ಆದರೆ ದೆಹಲಿಯ ವಾಯು ಮಾಲಿನ್ಯ ಇನ್ನೂ ಹತೋಟಿಗೆ ಬಂದಂತಿಲ್ಲ. ಮತ್ತೆ ಪಶ್ಚಿಮದಿಂದ ಬರುವ ಮಳೆಗಾಳಿಯಿಂದಲೇ ನಮಗೆಲ್ಲ ಈ ವಾಯುಮಾಲಿನ್ಯದಿಂದ ಮುಕ್ತಿ ದೊರೆತಿತೇನೊ?. ಈ ಬಾರಿ ಜನವರಿಯಲ್ಲಿ ದೆಹಲಿ ಮತ್ತು ಉತ್ತರ ಭಾರತವನ್ನೆಲ್ಲ ಆವರಿಸಿದ ಚಳಿಗಾಳಿ ಕಳೆದ ಹಲವಾರು ವರ್ಷಗಳ ದಾಖಲೆಗಳನ್ನು ಮುರಿದಿದೆಯೆಂಬುದು ಹವಾಮಾನ ಇಲಾಖೆಯ ಅಂಬೋಣ. ಮತ್ತೆಮತ್ತೆ ಬರುವ ಪಶ್ಚಿಮದ ಮಳೆರಾಯನಿಂದಾಗಿ ಚಳಿಯ ಪ್ರಕೋಪ ಕಡಿಮೆಯಾಗಿ, ವಾಯುಮಾಲಿನ್ಯ ಕರಗಿ ನಾವು ಮತ್ತೆ ಸರಾಗವಾಗಿ ಉಸಿರಾಡಿಸುವಂತಾಗಲಿ ಎಂದು ಹಾರೈಸೋಣ.

*ಡಾ. ವೆಂಕಟಾಚಲ ಹೆಗಡೆ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ, ರಾಷ್ಟ್ರ ರಾಜಧಾನಿ ದೆಹಲಿಯ ಕೆಂಪುಕೋಟೆ ನಮ್ಮ ರಾಷ್ಟ್ರದ ಇತಿಹಾಸ ಸಾರುತ್ತದೆ. ತನ್ನದೇ ಆದ ಇತಿಹಾಸವನ್ನು ಹೊಂದಿರುವ ಈ ಕೆಂಪು ಕೋಟೆಯಲ್ಲಿ 26 ಜನವರಿ ಗಣತಂತ್ರ ಉತ್ಸವ ದಿನದಂದು ನಡೆದಿರುವ ಘಟನೆ ತುಂಬ ದುಃಖಕರವಾಗಿದೆ. ರೈತರ ಹೆಸರಿನಲ್ಲಿ ಕೆಲವೊಂದು ಆತಂಕ ಸೃಷ್ಟಿಸುವ ಸಂಘಟನೆ ಮಾಡಿರುವ ಕೆಲಸ ನಮ್ಮ ದೇಶ ತಲೆ ತಗ್ಗಿಸುವಂತಾಗಿದೆ. ಜತೆಗೆ ನನ್ನ ಕುಟುಂಬ ದೆಹಲಿ ಪೊಲೀಸರ ಮೇಲೆ ನಡೆದ ಹಲ್ಲೆ ಯಾರೂ ಸಹಿಸಲಾರರು. ನಮ್ಮ ಕನ್ನಡಿಗರು ಸಹ ಇದರಲ್ಲಿ ಗಾಯಗೊಂಡಿದ್ದಾರೆ. ಅವರು ಆದಷ್ಟು ಬೇಗನೆ ಚೇತರಿಸಿಕೊಳ್ಳಲಿ. ಜೊತೆಗೆ ಈ ರೈತರ ಹೆಸರಿನಲ್ಲಿ ಕೆಲವೊಂದು ಸಂಘಟನೆಗಳು ಕೈಜೋಡಿಸಿ ನಿಜವಾದ ರೈತರಿಗೆ ಆಗುವ ಲಾಭಗಳನ್ನು ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳುವ ಪ್ರಯತ್ನ ಬಯಸಿದ ಎಲ್ಲಾ ದೇಶ ವಿರೋಧಿಗಳಿಗೆ ಧಿಕ್ಕಾರವಿರಲಿ.

ಮಾನ್ಯ ಪ್ರಧಾನಮಂತ್ರಿಗಳು ನಿಜವಾದ ರೈತರೊಂದಿಗೆ ಮತ್ತು ಈ ಬಿಲ್‌ನಲ್ಲಿ ತೊಂದರೆ ಇರುವ ಭಾಗಗಳನ್ನು ಸರಿಪಡಿಸಿ ಕಾನೂನನ್ನು ರೈತರ ಪರವಾಗಿ ಮಾಡಲಿ. ಆತ್ಮೀಯರೆ, ನಾನು ಒಬ್ಬ ರೈತ ಕುಟುಂಬದಿಂದ ಬಂದು ರೈತನಾಗಿ ಕೆಲಸ ಮಾಡಿ ಇದರಲ್ಲಿ ರೈತರ ಪರವಾಗಿರುವ ಲಾಭಗಳನ್ನು ಸ್ವತಃ ಅರಿತುಕೊಂಡಿದ್ದೇನೆ. ಈ ಬಿಲ್ ರೈತರ ಪರವಾಗಿದೆ. ರೈತರಿಗೆ ಏನಾದರೂ ಇನ್ನೂ ಬದಲಾವಣೆಗಳು ಬೇಕಾದರೆ ರೈತರೊಂದಿಗೆ ಚರ್ಚಿಸಿ. ರೈತ ದೇಶದ ಬೆನ್ನೆಲುಬು. ಹಾಗಾಗಿ ಅವರ ಜೊತೆ ನಾವು ನಿಲ್ಲಲೇಬೇಕು ಎಂದು ಆಶಿಸುವ...

ನಮ್ಮ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳ ಜೊತೆಗೆ ಮಾರ್ಚ್ ತಿಂಗಳಲ್ಲಿ ವಾರ್ಷಿಕೋತ್ಸವ ಅಂಗವಾಗಿ ಆಟೋಟ ಸ್ಪರ್ಧೆಗಳು ಮತ್ತು ಕ್ರಿಕೆಟ್ ಪಂದ್ಯಾವಳಿ ಎಲ್ಲವೂ ಸಹ ಕೇಂದ್ರ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸಿಕೊಂಡು ಹಮ್ಮಿಕೊಂಡಿದ್ದೇವೆ. ದಯವಿಟ್ಟು ಇದರಲ್ಲಿ ಭಾಗವಹಿಸಿ ತಮ್ಮ ತಂಡದ ಹೆಸರುಗಳು ಮತ್ತು ಈ ಆಟೋಟಗಳಲ್ಲಿ ಭಾಗವಹಿಸುವ ಸದಸ್ಯರು ತಮ್ಮ ಹೆಸರುಗಳನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಸಂಘದ ವಾರ್ಷಿಕ ಮಹಾಸಭೆ ಮತ್ತು ಚುನಾವಣೆ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯಬೇಕಾಗಿದೆ. ಮಾರಕ ರೋಗ ಕೊರೊನಾ ನಿಯಂತ್ರಣಕ್ಕೆ ಬರುತ್ತಿದೆ. ಕೇಂದ್ರ ಸರ್ಕಾರದ ನಿಯಮಗಳನ್ನು ಪಾಲಿಸಿಕೊಂಡು ಬರುವ ದಿನಗಳಲ್ಲಿ ಮೇ-ಜೂನ್ ಬೇಸಿಗೆ ಕಳೆದು ನಂತರ ಮಾಡಬೇಕಾಗಿದೆ.

ಸಂಘ ನೀಡಬೇಕಾದ ಪ್ರಶಸ್ತಿಗಳಿಗೆ ಈಗಾಗಲೇ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ ಒಂದು ಸಮಿತಿಯನ್ನು ರಚಿಸಲಾಗಿದೆ. ಡಾ. ಸರೋಜಿನಿ ಮಹಿಷಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ ಮತ್ತು ಕನ್ನಡ ಭಾರತಿ ರಂಗ ಪ್ರಶಸ್ತಿಗಳನ್ನು ಆದಷ್ಟು ಬೇಗನೆ ನೀಡುತ್ತಿದ್ದೇವೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಮಾರಕ ರೋಗ ಕೊರೊನಾವನ್ನು ಮುಕ್ತ ಮಾಡುವ. ಜೊತೆಗೆ ನಮ್ಮ ಕಾರ್ಯಕ್ರಮಗಳನ್ನು ಪ್ರಾರಂಭಿಸೋಣ. ಶುಭವಾಗಲಿ.

ಜೈ ಹಿಂದ್, ಜೈ ಕರ್ನಾಟಕ ಮಾತೆ

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ಸಂಘಕ್ಕೆ ನೂತನ ಕಾವಲು ಸಮಿತಿ

ದಿನಾಂಕ 03.01.2021ರಂದು ನಡೆದ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನೂತನ ಕಾವಲು ಸಮಿತಿಯನ್ನು ರಚಿಸಲಾಯಿತು.

ಅದರಂತೆ ಸಂಘದ ಆಜೀವ ಸದಸ್ಯರಾದ ಮಾಜಿ ಕೋಶಾಧಿಕಾರಿ ಈಶ್ವರ ಮಡಿವಾಳ, ಹಿರಿಯ ಸದಸ್ಯರಾದ ಅನಂತರಾಮ ಅರಳ ಮತ್ತು ಡಿ.ವಿ.ಎಸ್. ಮೂರ್ತಿ ಅವರನ್ನು ನೂತನ ಕಾವಲು ಸಮಿತಿಯ ಸದಸ್ಯರಾಗಿ ಮಹಾಸಭೆ ಅನುಮೋದಿಸಿತು.



**ಅನಂತರಾಮ ಅರಳ**




**ಡಿ.ವಿ.ಎಸ್. ಮೂರ್ತಿ**



**ಈಶ್ವರ ಮಡಿವಾಳ**

**ವಿಶೇಷ ಸೂಚನೆ :**

## ಕ್ರಿಕೆಟ್ ಪಂದ್ಯಾವಳಿ



ದೆಹಲಿ ಕರ್ನಾಟಕ ಸಂಘವು ಕ್ರಿಕೆಟ್ ಪಂದ್ಯಾವಳಿಯನ್ನು ಮಾರ್ಚ್ 13 ಮತ್ತು 14, 2021 ರಂದು ತಾಲ್ಕತೋರಾ ಮೈದಾನದಲ್ಲಿ ಆಯೋಜಿಸಿದೆ. ಸಂಘದ ಸದಸ್ಯರು ಮಾತ್ರ ಪಂದ್ಯಾವಳಿಯಲ್ಲಿ ಭಾಗವಹಿಸಬಹುದು. ತಂಡದ ಹೆಸರುಗಳನ್ನು ನೀಡಲು **05.03.2021** ಕೊನೆಯ ದಿನಾಂಕವಾಗಿರುತ್ತದೆ.

ಆಟೋಟ ಸ್ಪರ್ಧೆಗಳನ್ನು ಮಾರ್ಚ್ 20 ಮತ್ತು 21ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆಸಲಾಗುವುದು. ವಾಲಿಬಾಲ್ ಮತ್ತು ಥ್ರೋಬಾಲ್ ತಂಡದ ಹೆಸರುಗಳನ್ನು ನೀಡಲು 15.03.2021 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ – 98113 25440 / 99680 74409 ಕ್ರೀಡಾ ಸಮಿತಿ ಅಧ್ಯಕ್ಷ–ಡಾ. ಎಂ.ಎಸ್. ಶಶಿಕುಮಾರ್–98116 89337 ಮತ್ತು ಕ್ರೀಡಾ ಸಮಿತಿ ಸಂಚಾಲಕ ಸಂತೋಷ ಜೆ.–99112 35783

**ಪ್ರಧಾನ ಕಾರ್ಯದರ್ಶಿ**

# ದೆಹಲಿ ಕರ್ನಾಟಕ ಸಂಘದಲ್ಲಿ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ಹಣಕಾಸು ವರ್ಷ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ದಿನಾಂಕ 03.01.2021ರಂದು ಝೂಮ್ ಆ್ಯಪ್ ಮೂಲಕ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಚರ್ಚೆಯ ಬಳಿಕ ಅನುಮೋದಿಸಲಾಯಿತು.

ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸರ್ವ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಕೋವಿಡ್-19 ಕಾರಣದಿಂದಾಗಿ ಸರ್ವಸದಸ್ಯರ ಸಭೆಯನ್ನು ನಿಗದಿತ ಸಮಯದಲ್ಲಿ ನಡೆಸಲು ಸಾಧ್ಯವಾಗದಿದ್ದನ್ನು ಮತ್ತು ಸರಕಾರದ ನಿಯಮಾವಳಿಗಳನ್ನು ಗಮನದಲ್ಲಿರಿಸಿಕೊಂಡು ಝೂಮ್ ಆಪ್ ಮೂಲಕ ಸರ್ವಸದಸ್ಯರ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು. ಈ ಕಾರ್ಯಕಾರಿ ಸಮಿತಿಯ ಅವಧಿಯಲ್ಲಿ ಸಂಘದ ಕಾರ್ಯಕ್ರಮಗಳಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಸಭೆಯ ಕಾರ್ಯಕಲಾಪಕ್ಕೂ ಮುನ್ನ ಈಚೆಗೆ ನಿಧನರಾದ ಸಂಘದ ಆಜೀವ ಸದಸ್ಯರುಗಳಾದ ಡಾ. ಎಂ.ಎಸ್. ಮುಧೋಳ್, ನಾಗಶ್ರೀಧರ, ಆರ್.ಡಿ. ಪಾಟೀಲ್, ಸಂಗಮೇಶ, ಗಲಗಲಿ, ಡಾ. ಹೆಚ್. ಬಾಸ್ಕರ್, ಕೋಮಲಾ ವರದನ್, ವಿ. ಗೀತಾರಾವ್, ಎನ್. ಜಯಕುಮಾರ್, ಎಸ್.ಎಸ್. ಕುಮ್ಮನ್, ಜಯಮಾಲಾ ಪಿ. ಶೆಟ್ಟಿ, ಎಸ್. ರಾಮಾನುಜನ್, ಎನ್.ಪಿ. ಭಟ್, ಎಂ.ಎಚ್. ಪೂಜಾರಿ, ಇಸ್ಮಾಯಿಲ್ ಬುಡಂದಿ, ಆರ್.ಎಸ್. ಶ್ಯಾಮ್‌ಸುಂದರ್, ಪದ್ಮಾಸಂಪತ್ ಕುಮಾರ್, ಜಿ.ಬಿ. ಹೆಗಡೆ, ದೇವರಾಜ್, ಬಿ.ಆರ್. ಮಹಾಲಿಂಗಪ್ಪ, ಎನ್. ಎಂ. ಶೆಟ್ಟಿ, ಬೈಯಣ್ಣ ಟಿ.ವಿ., ನಿಟ್ಟೂರು ಜಯರಾಮ್ ಸುರೇಶ್, ಸುರೇಶ್ ಎಚ್.ಎಲ್., ರೋಷನ್ ಕೆ. ಹಾಗೂ ಕೊರೊನಾದಿಂದಾಗಿ ಅಗಲಿದ ಕೇಂದ್ರ ಸಚಿವರು ಹಾಗೂ ಗಣ್ಯ ಮಹನೀಯರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಾರ್ಷಿಕ ವರದಿಯನ್ನು ಹಾಗೂ ಕೋಶಾಧಿಕಾರಿ ಶ್ರೀಮತಿ ಆಶಾಲತ ಎಂ ಅವರು ಪರಿಶೋಧಿತ 2018-19 ಮತ್ತು 2019-208ನೇ ಸಾಲಿನ ಲೆಕ್ಕಪತ್ರ ಹಾಗೂ 2020-21ನೇ ಸಾಲಿನ ಬಜೆಟನ್ನು ಮಂಡಿಸಿದರು.

ಸಂಘದ ಮಾಜಿ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ, ವಸಂತ ಶೆಟ್ಟಿ ಬೆಳ್ಳಾರೆ, ಮಾಜಿ ಕಾರ್ಯದರ್ಶಿ ಎಸ್. ಕೃಷ್ಣ ಭಟ್, ಮಾಜಿ ಕೋಶಾಧಿಕಾರಿಗಳಾದ ಈಶ್ವರ ಮಡಿವಾಳ, ಕೆ.ಆರ್. ರಾಮಮೂರ್ತಿ ಹಾಗೂ ಸಂಘದ ಅನೇಕ ಮಂದಿ ಸದಸ್ಯರುಗಳು ಸೂಕ್ತ ಸಲಹೆ ಹಾಗೂ ಅಭಿಪ್ರಾಯಗಳನ್ನು ನೀಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದರು.

ಮಹಾಸಭೆಯಲ್ಲಿ ಈಶ್ವರ ಮಡಿವಾಳ, ಅನಂತರಾಮ ಅರಳಿ ಮತ್ತು ಡಿ.ವಿ.ಎಸ್. ಮೂರ್ತಿ ಅವರು ಸದಸ್ಯರಾಗಿ ಒಳಗೊಂಡ ನೂತನ ಕಾವಲು ಸಮಿತಿಯನ್ನು ರಚಿಸಲಾಯಿತು.

## ಅಭಿನಂದನೆ

# ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಡಾ. ದೊಡ್ಡರಂಗೇಗೌಡ

ಹಾವೇರಿಯಲ್ಲಿ ಮೂರು ದಿನಗಳ ಕಾಲ ಸದ್ಯದಲ್ಲೇ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಹಿರಿಯ ಸಾಹಿತಿ ಪದ್ಮಶ್ರೀ ಡಾ. ದೊಡ್ಡರಂಗೇಗೌಡ ಆಯ್ಕೆ ಆಗಿದ್ದಾರೆ. ಕವಿ, ಸಾಹಿತಿ, ಪ್ರಾಧ್ಯಾಪಕ ಮತ್ತು ಚಲನಚಿತ್ರ ಸಾಹಿತಿ ಡಾ. ದೊಡ್ಡರಂಗೇಗೌಡರು ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ 80ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮನುಜ ಕಾವ್ಯನಾಮದ ಗೌಡರು ಗ್ರಾಮೀಣ ಸೊಗಡಿನ ಗೀತ ಸಾಹಿತ್ಯಕ್ಕೆ ಹೆಸರುವಾಸಿ. ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕುರುಬರಹಳ್ಳಿಯಲ್ಲಿ 1946ರಲ್ಲಿ ಜನಿಸಿದ ಇವರು ಕನ್ನಡ ನವೋದಯ ಕಾವ್ಯ - ಒಂದು ಪುನರ್ ಮೌಲ್ಯಮಾಪನ ಎಂಬ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಗಳಿಸಿದ್ದರು. 2008 ರಿಂದ 2014 ರವರೆಗೆ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿದ್ದರು.

ಗೌಡರು ಸುಮಾರು 600 ಚಲನಚಿತ್ರ ಗೀತೆಗಳನ್ನು ಬರೆದಿದ್ದಾರೆ. ಸಿನೆಮಾಗಳಿಗೆ ಸಂಭಾಷಣೆ ಬರೆದಿದ್ದಾರೆ. ಒಂದು ಚಲನಚಿತ್ರವನ್ನು ನಿರ್ದೇಶಿಸಿದ್ದಾರೆ.

ದೊಡ್ಡರಂಗೇಗೌಡರು ದೆಹಲಿ ಕರ್ನಾಟಕ ಸಂಘದೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದಾರೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಆಗಿರುವ ಇವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.



# ಕಾವ್ಯ ಕ್ಷಣಿಕವಾಗದೇ ಜೀವಂತವಾಗಿರಲಿ

## ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿ ಡಾ. ಎಚ್.ಎಸ್. ಶಿವಪ್ರಕಾಶ



ಚಿತ್ರ ಕೃಪೆ : ಚೆನ್ನು ಎಸ್. ಮಠದ

ಕಾವ್ಯ ಯಾವಾಗಲೂ ಕ್ಷಣಿಕ ಇರದೇ ಭವಿಷ್ಯಕ್ಕೆ ಜೀವಂತವಾಗಿರಬೇಕು. ಬಹುತೇಕ ಕನ್ನಡದ ಶ್ರೇಷ್ಠ ಕವಿ, ಸಾಹಿತಿಗಳು ಭೌತಿಕವಾಗಿ ಇಂದು ನಮ್ಮೊಂದಿಗೆ ಇರದಿದ್ದರೂ ಅವರ ಕಾವ್ಯದ ಮೂಲಕ ಜೀವಂತವಾಗಿದ್ದಾರೆ. ಅ ಪೈಕಿ ಬೇಂದ್ರೆ ಕೂಡ ಪ್ರಮುಖರು ಎಂದು ಹಿರಿಯ ಕವಿ ಡಾ. ಎಚ್.ಎಸ್. ಶಿವಪ್ರಕಾಶ ಹೇಳಿದರು.

ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿಯನ್ನು ಬೇಂದ್ರೆ ಭವನದಲ್ಲಿ ದಿನಾಂಕ 31.01.2021ರಂದು ಬೇಂದ್ರೆ ಅವರ 125ನೇ ಜನ್ಮದಿನದ ನಿಮಿತ್ತ ಸ್ವೀಕರಿಸಿ ಅವರು ಮಾತನಾಡಿದರು. ಧಾರವಾಡದ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಈ ಪ್ರಶಸ್ತಿಯನ್ನು ನೀಡಿದೆ.

ಕಾವ್ಯ ಗುರುಗಳಲ್ಲಿ ಒಬ್ಬರಾದ, ನುಡಿಗಟ್ಟನ್ನು ಕಟ್ಟಲು ಸಹಾಯಕರಾದ ಬೇಂದ್ರೆಯವರ ಹೆಸರಿನ ಪ್ರಶಸ್ತಿ ದೊರೆತಿರುವುದು ಸಂತಸ ಮೂಡಿಸಿದೆ. ದ.ರಾ. ಬೇಂದ್ರೆಯವರಲ್ಲಿ ವಾಕ್‌ಶಕ್ತಿ ಇದ್ದರೆ, ಕುವೆಂಪು ಅವರಲ್ಲಿ ಅಕ್ಷರ ವೈಭವವಿತ್ತು ಎಂದ ಅವರು, ಅವರಿಬ್ಬರು ಸಾಹಿತ್ಯ ಧ್ರುವತಾರೆ. ಅವರ ಹತ್ತಿರಕ್ಕೆ ನಾವು ಹೋಗುತ್ತಿರಲಿಲ್ಲ. ಅವರೇ ನಮ್ಮನ್ನು ಕರೆದುಕೊಂಡರು ಎಂದು ಬೇಂದ್ರೆ, ಕುವೆಂಪು ಕುರಿತಾಗಿ ಹೇಳಿದರು.

ನನ್ನ ಕಾವ್ಯ ಕೃಷಿಯ ಆರಂಭದಲ್ಲಿ ಬೇಂದ್ರೆ ಕಾವ್ಯದ ಓದು ನನ್ನಲ್ಲಿ ಹೊಸ ಚಿಂತನೆ, ಆಲೋಚನೆ ಹುಟ್ಟುಹಾಕಿತು. ಅದರ ಪ್ರೇರಣೆಯಿಂದ ನನ್ನದೇ ಆದ ನೆಲೆಗಟ್ಟಿನಲ್ಲಿ ಬರವಣಿಗೆ ಪ್ರಾರಂಭಿಸಿದೆ. ಅದು ಸಾರ್ಥಕತೆ ನೀಡಿತು. ಇಂದು ಕನ್ನಡದಲ್ಲಿ ಕೆಲ ಕವಿಗಳು ನನ್ನ ಕಾವ್ಯದಿಂದ ಪ್ರೇರಣೆ ಪಡೆದು ತಮ್ಮದೇ ಮಾರ್ಗ ಕಂಡುಕೊಂಡು ಅಕ್ಷರ ರೂಪ ನೀಡುತ್ತಿದ್ದಾರೆ. ಇದು ಸಮಾಧಾನ ತರುವ ಸಂಗತಿ ಎಂದರು.

ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ ಮಾತನಾಡಿ, ಯುಗದ ಕವಿ, ಜಗದ ಕವಿ ಡಾ. ದ.ರಾ. ಬೇಂದ್ರೆ ಒಬ್ಬ ಅವಧೂತ ಕವಿ. ಮಾನವ ಸಂಬಂಧಗಳು, ಪ್ರೀತಿ, ನಿಸರ್ಗದ ಅನುಸಂಧಾನವನ್ನು ಅವರ ಕಾವ್ಯದುದ್ದಕ್ಕೂ ಕಾಣುತ್ತೇವೆ. ಅದಕ್ಕಿಂತ ಹೆಚ್ಚಾಗಿ ಬೇಂದ್ರೆ ಕಾವ್ಯ ಪರಮಾತ್ಮನ ಜತೆ ನಡೆಯುವ ಒಂದು ಅನುಸಂಧಾನ. ಬದುಕನ್ನೇ ಕಾವ್ಯವಾಗಿಸಿ ಕೊಂಡವರು. ಆತ್ಮ ಸಂತೋಷಕ್ಕಾಗಿ ಬರೆದವರು. ಸಾಹಿತ್ಯದ ಮೂಲಕ ಕನ್ನಡ, ಮರಾಠಿ ಭಾವೈಕ್ಯತೆ ಸಾರಿದ ಕವಿ ಡಾ. ದ.ರಾ. ಬೇಂದ್ರೆ ಎಂದು ಬಣ್ಣಿಸಿದರು.

ಭಾಷಾವಾರು ಪ್ರಾಂತ ರಚನೆಯಾಗಿ ಇಷ್ಟು ವರ್ಷಗಳ ನಂತರವೂ ನಾವು ಭಾಷೆ ಹೆಸರಿನಲ್ಲಿ ಗಡಿ ತಗಾದೆ ಹುಟ್ಟು ಹಾಕುತ್ತಿದ್ದೇವೆ. ಅವುಗಳನ್ನು ನಿವಾರಿಸಲು ವಿಶೇಷ ಆಯೋಗವಿದೆ. ಆದರೆ ಸೃಜನಶೀಲ ಸಾಹಿತಿಯೊಬ್ಬ ಮನಸ್ಸುಗಳನ್ನು ಕಟ್ಟುವ ಕೆಲಸ ಮಾಡುತ್ತಾನೆ ಎಂದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, ಕನ್ನಡದ ದೇಸಿತನ, ಜಾನಪದ ಪರಂಪರೆಯನ್ನು ತಮ್ಮ ಕಾವ್ಯದಲ್ಲಿ ಧಾರಾಳವಾಗಿ ಬಳಸಿದವರು ಡಾ. ಎಚ್.ಎಸ್. ಶಿವಪ್ರಕಾಶ. ಹೀಗಾಗಿ ಅವರ ಕಾವ್ಯವನ್ನು ಭಾರತೀಯ ಅಥವಾ ಪಾಶ್ಚಾತ್ಯ ಕಾವ್ಯ ಮೀಮಾಂಸೆ ಚೌಕಟ್ಟಿನಲ್ಲಿ ವಿವರಿಸುವುದು ಕಷ್ಟ. ಅದಕ್ಕಾಗಿಯೇ ದೇಸಿ ಕಾವ್ಯ ಮೀಮಾಂಸೆಯ ಅಗತ್ಯವಿದೆ ಎಂದರು.

ಬೇಂದ್ರೆ ಟ್ರಸ್ಟ್ ಅಧ್ಯಕ್ಷ ಡಾ. ಡಿ.ಎಂ. ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿ ನಿತೇಶ ಪಾಟೀಲ, ಉಪವಿಭಾಗಾಧಿಕಾರಿ ಡಾ. ಗೋಪಾಲಕೃಷ್ಣ, ಪ್ರಕಾಶ ಬಾಳಿಕಾಯಿ, ಮಾಯಾ ರಾಮನ್ ಇದ್ದರು.

(ಕೃಪೆ : ಕನ್ನಡ ಪ್ರಭ)




**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.**

**ದೂರವಾಣಿ : 011–26109615 / 26104818**

**ಅಭಿನಂದನೆ**


# ಐವರು ಕನ್ನಡಿಗರಿಗೆ ಪದ್ಮ ಪ್ರಶಸ್ತಿಯ ಗೌರವ

ಖ್ಯಾತ ವೈದ್ಯ ಡಾ. ಬಿ.ಎಂ. ಹೆಗ್ಡೆ (ಡಾ. ಬೆಳ್ಳೆ ಮೋನಪ್ಪ ಹೆಗ್ಡೆ) ಸೇರಿದಂತೆ ಕರ್ನಾಟಕದ ಐವರಿಗೆ 2021ನೇ ಸಾಲಿನ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮ ಪ್ರಶಸ್ತಿಯನ್ನು ಭಾರತ ಸರಕಾರ ಪ್ರಕಟಿಸಿದೆ.


ವೈದ್ಯಕೀಯ ಕ್ಷೇತ್ರದಲ್ಲಿನ ಸೇವೆಗಾಗಿ ಡಾ. ಬಿ.ಎಂ. ಹೆಗ್ಡೆ ಅವರಿಗೆ ಪದ್ಮ ವಿಭೂಷಣ ಪ್ರಶಸ್ತಿ, ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿನ ಸೇವೆಗಾಗಿ ಖ್ಯಾತ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅವರು ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಡಾ. ರಂಗಸಾಮಿ ಲಕ್ಷ್ಮೀ ನಾರಾಯಣ ಕಶ್ಯಪ್ (ಸಾಹಿತ್ಯ ಮತ್ತು ಶಿಕ್ಷಣ) ಮಾತಾ ಬಿ. ಮಂಜಮ್ಮ ಜೋಗತಿ (ಕಲೆ) ಮತ್ತು ಕೆ.ವೈ. ವೆಂಕಟೇಶ್ (ಕ್ರೀಡೆ) ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಘೋಷಿಸಲಾಗಿದೆ.


ಈ ಬಾರಿಯ ಪದ್ಮ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದ ಈ ಎಲ್ಲ ಕನ್ನಡದ ಸಾಧಕರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.



ಡಾ. ಬಿ.ಎಂ. ಹೆಗ್ಡೆ



ಡಾ. ಚಂದ್ರಶೇಖರ ಕಂಬಾರ



ಡಾ. ಆರ್.ಎಲ್. ಕಶ್ಯಪ್



ಮಂಜಮ್ಮ ಜೋಗತಿ



ಕೆ.ವೈ. ವೆಂಕಟೇಶ್

# ಕನ್ನಡಿಗ ಸುಬ್ರಾಯ ಹೆಗಡೆ ಅವರಿಗೆ ಅಮೇರಿಕಾದ ಕೃಷಿ ಇಲಾಖೆಯ ಪ್ರಶಸ್ತಿ

ಅಮೇರಿಕಾ ಸಂಯುಕ್ತ ಸಂಸ್ಥಾನದ ಕೃಷಿ ಇಲಾಖೆಯ ಅತ್ಯುಚ್ಛ ಪ್ರಶಸ್ತಿಗೆ ಶಿರಸಿ ತಾಲೂಕಿನ ಸಾಲ್ಕಣಿಯ ಸುಬ್ರಾಯ ಹೆಗಡೆ ಭಾಜನರಾಗಿದ್ದು, ದಿನಾಂಕ 12.01.2021 ರಂದು ಅಂತರ್ಜಾಲ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

2007ರಲ್ಲಿ ಅಮೇರಿಕ ಸಂಯುಕ್ತ ಸಂಸ್ಥಾನದ ಕೃಷಿ ಇಲಾಖೆಯನ್ನು ಸೇರಿದ ಸುಬ್ರಾಯ ಹೆಗಡೆ ಪ್ರಸ್ತುತ ಅದರ ಜೈವಿಕ ತಂತ್ರಜ್ಞಾನ ಸೇವೆಗಳ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ವಂಶಾಣು ಪರಿವರ್ತಿತ ಸಸ್ಯ, ಕೀಟ ಹಾಗೂ ಸೂಕ್ಷ್ಮಜೀವಿಗಳು ಮನುಷ್ಯರ ಹಾಗೂ ಪಶುಗಳ ಆಹಾರ ಮತ್ತು ಕೃಷಿ ಪರಿಸರದ ಮೇಲೆ ದುಃಷ್ಪರಿಣಾಮ ಉಂಟುಮಾಡದಂತೆ ನಿಯಂತ್ರಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

ಸುಬ್ರಾಯ ಹೆಗಡೆ, ಕಾವೇರಿ ಹಾಗೂ ಗಣಪತಿ ವೀರಪ್ಪ ಹೆಗಡೆ ಇವರ ಕಿರಿಯ ಪುತ್ರರಾಗಿದ್ದು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ 1989ರಲ್ಲಿ ಡಾಕ್ಟರೇಟ್ ಗಳಿಸಿದರು.

ಅಲ್ಲಿಯೇ ಸಹಾಯಕ ಪ್ರಾಧ್ಯಾಪಕರಾಗಿ ಕೆಲ ಕಾಲ ಸೇವೆ ಸಲ್ಲಿಸಿ ಮುಂದೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿಜ್ಞಾನಿಯಾಗಿ ಸೇರ್ಪಡೆಗೊಂಡರು. ಅವರು ಭತ್ತ ಮತ್ತು ನೆಲಗಡಲೆ ಬೆಳೆಗಳಲ್ಲಿ ಅನುಕ್ರಮವಾಗಿ ಧಾನ್ಯ ಹಾಗೂ ಬೀಜಗಳ ಇಳುವರಿ ಅಧಿಕಗೊಳಿಸುವ ಕ್ರಮಗಳನ್ನು ಕುರಿತು ಪ್ರಯೋಗ ನಡೆಸಿದರು. ಅವರು ಜಗತ್ತಿನ ವಿವಿಧ ಭಾಗಗಳ ಹಲವು ಪ್ರಭೇಧಗಳನ್ನು ಸಂಗ್ರಹಿಸಿ ಆ ತಳಿಗಳಲ್ಲಿ ಇರುವ ವಿಶಿಷ್ಟ ಗುಣಗಳನ್ನು ಒಟ್ಟುಗೂಡಿಸಿ ಅಧಿಕ ಇಳುವರಿ ಪಡೆಯಲು ಯಾವ ಸಂಯೋಜನೆ ಪರಿಣಾಮಕಾರಿ ಎನ್ನುವ ಅಂಶವನ್ನು ಪರಿಶೀಲನೆ ಮಾಡಿದ್ದಾರೆ.

1994ರಿಂದ 2006ರವರೆಗೆ ಅವರು ಕ್ಯಾಲಿಫೋರ್ನಿಯಾದ ವಿಶ್ವವಿದ್ಯಾಲಯಗಳಲ್ಲಿ ತಳಿವಿಜ್ಞಾನವನ್ನು



ಬೋಧಿಸಿದರು ಮತ್ತು ಗೋಧಿ ಮತ್ತು ಮೂಲಂಗಿ ಕುರಿತು ಸಂಶೋಧನೆ ನಡೆಸಿದರು.

*ನರಸಿಂಹ ಹೆಗಡೆ*

# ರಾಜಪಥದಲ್ಲಿ ವಿಜಯನಗರ ವೈಭವ ಬಿಂಬಿಸಿದ ಸ್ತಬ್ಧಚಿತ್ರ



ನವದೆಹಲಿಯಲ್ಲಿ ಗಣರಾಜ್ಯೋತ್ಸವ ಸಮಾರಂಭದ ಸುಸಂದರ್ಭದಲ್ಲಿ ಜನವರಿ 26 ರಂದು ನಡೆದ ಪೆರೇಡ್‌ನಲ್ಲಿ, ವಿಜಯನಗರ : ವಿಜಯದ ನಗರ' ಕರ್ನಾಟಕದ ಸ್ತಬ್ಧಚಿತ್ರವು ರಾಜಪಥದಲ್ಲಿ ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು. ಪ್ರತಿ ಬಾರಿಯೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸ್ತಬ್ಧಚಿತವು ರಾಜ್ಯವನ್ನು ಪ್ರತಿನಿಧಿಸುತ್ತಿದೆ.

ಕರ್ನಾಟಕ ಡೆಕ್ಕನ್ ಪ್ರಸ್ಥಭೂಮಿಯ ತುಂಗಭದ್ರಾ ನದಿಯ ದಡದಲ್ಲಿ ಪ್ರವರ್ಧಮಾನಕ್ಕೆ ಬಂದ ವಿಜಯನಗರ ಸಾಮ್ರಾಜ್ಯದ ರಾಜಧಾನಿ ವಿಜಯನಗರ.

ಸಂಗಮ ರಾಜವಂಶದ ಹರಿಹರ–1 ಮತ್ತು ಬುಕ್ಕರಾಯ–1 ಇಬ್ಬರು ಸೋದರರು ಈ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಸಂಗಮ ವಂಶದವರು ತಮ್ಮ ಆಡಳಿತದ ಉತ್ತುಂಗದ ಅವಧಿಯಲ್ಲಿ ದಕ್ಷಿಣ ಭಾರತದ ಬಹುತೇಕ ಕುಟುಂಬಗಳು ಹಾಗೂ ಡೆಕ್ಕನ್ ಪ್ರಾಂತ್ಯದ ಸುಲ್ತಾನರನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದರು. ದಕ್ಷಿಣ ಭಾರತದ ಎಲ್ಲೆಡೆ ಬಹುತೇಕ ಸ್ಮಾರಕಗಳಿರುವ, ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೋ) ವತಿಯಿಂದ ವಿಶ್ವ ಪರಂಪರೆಯ ಸ್ಥಳ ಎಂದು ಗುರುತಿಸಲ್ಪಟ್ಟಿರುವ, ಅತ್ಯಂತ ಪ್ರಸಿದ್ಧವಾದ ಹಾಗೂ ಇದೀಗ ಅವಶೇಷಗಳ ತಾಣವಾಗಿರುವ ಹಂಪಿ ವಿಜಯನಗರ ಸಾಮ್ರಾಜ್ಯದ ಅಸ್ಮಿತೆ ಮಾತ್ರವಲ್ಲ, ಪರಂಪರೆಯಾಗಿದೆ.

ಐರೋಪ್ಯ ಹಾಗೂ ಪರ್ಷಿಯಾ ಪ್ರವಾಸಿಗರ ಕಥನಗಳು ಹಾಗೂ ಪುರಾತತ್ವ ಉತ್ಖನನಗಳು ವಿಜಯನಗರ ಸಾಮ್ರಾಜ್ಯದ ಶಕ್ತಿ ಮತ್ತು ಶ್ರೀಮಂತಿಕೆಯನ್ನು ಬಹಿರಂಗಪಡಿಸುತ್ತವೆ. ಪರ್ಷಿಯಾ ಮತ್ತು ಪೋರ್ಚುಗಲ್ಲಿನಿಂದ ವ್ಯಾಪಾರಸ್ಥರನ್ನು ಆಕರ್ಷಿಸುತ್ತಿದ್ದ ಹಂಪಿ–ವಿಜಯನಗರವು, 1500ನೇ ಇಸವಿಯಲ್ಲಿ ಬೀಜಿಂಗ್ನ ನಂತರ, ವಿಶ್ವದ ಅತೀ ದೊಡ್ಡ ಹಾಗೂ ಭಾರತದ ಅತ್ಯಂತ ಸಿರಿವಂತ ಮಧ್ಯಕಾಲೀನ ಯುಗದ ನಗರಿಯಾಗಿತ್ತು.

ಹಂಪಿಯ ಕೇಂದ್ರ ಬಿಂದು ಎನಿಸಿರುವ ಉಗ್ರನರಸಿಂಹ, ಭಗವಾನ್ ಹನುಮನ ಜನ್ಮಸ್ಥಳ ಎಂದು ಹೇಳಲಾದ ಅಂಜನಾದ್ರಿ ಬೆಟ್ಟ, 1509 ರಲ್ಲಿ ನಡೆದ ವಿಜಯನಗರ ಸಾಮ್ರಾಜ್ಯದ ಸರ್ವಶ್ರೇಷ್ಠ ಸಾಮ್ರಾಟ ಶ್ರೀಕೃಷ್ಣದೇವರಾಯರ ಪಟ್ಟಾಭಿಷೇಕ ಸಮಾರಂಭ ಹಾಗೂ ಹಜಾರ ರಾಮ ದೇವಾಲಯದ ಭಿತ್ತಿಚಿತ್ರಗಳನ್ನು ಈ ಸ್ತಬ್ಧಚಿತ್ರವು ಬಿಂಬಿಸುತ್ತದೆ.

ಪ್ರಾಸಂಗಿಕವೋ ಎಂಬಂತೆ ಬಳ್ಳಾರಿ ಜಿಲ್ಲೆಯಿಂದ ಹೊರಹೊಮ್ಮಿದ ವಿಜಯನಗರವು ರಾಜ್ಯದ 31ನೇ ಜಿಲ್ಲೆಯಾಗಿ ಡಿಸೆಂಬರ್ 2020ರಲ್ಲಿ ಕರ್ನಾಟಕ ಸರ್ಕಾರದಿಂದ ಅಧಿಸೂಚಿಸಲ್ಪಟ್ಟಿದೆ.

ರಾಜ್ಯದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖಾ ಕಾರ್ಯದರ್ಶಿಗಳ ಅಧ್ಯಕ್ಷತೆಯ ನೇತೃತ್ವದಲ್ಲಿ ವಿಷಯ ಆಯ್ಕೆ ಕುರಿತಾಗಿ ಸಮಿತಿಯು ಸಭೆ ಸೇರಿ ಐದು ವಿಷಯಗಳನ್ನು ಆಯ್ಕೆ ಮಾಡಿ, ವಿಷಯಕ್ಕೆ ಅನುಗುಣವಾಗಿ ವಿನ್ಯಾಸ ಸಿದ್ಧಪಡಿಸಿ, ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಸೂಚನೆಯಂತೆ ಕಳುಹಿಸಿಕೊಡಲಾಗುತ್ತದೆ.

ರಕ್ಷಣಾ ಮಂತ್ರಾಲಯದ ಸ್ತಬ್ಧಚಿತ್ರ ವಿಷಯ ಆಯ್ಕೆ ತಜ್ಞರ ಸಮಿತಿ ಇವುಗಳಲ್ಲಿ ಒಂದನ್ನು ಅಂತಿಮಗೊಳಿಸಿ, ವಿನ್ಯಾಸದಲ್ಲಿ ಬದಲಾವಣೆ ಸೂಚಿಸುತ್ತದೆ. ಈ ರೀತಿ ಅನೇಕ ಸಭೆಗಳಲ್ಲಿ ವಿನ್ಯಾಸ, ತ್ರೀ–ಡಿ ಕೀ ಮಾಡೆಲ್ನೊಂದಿಗೆ ವಿಷಯವನ್ನು, ಇಲಾಖೆ ಪ್ರತಿನಿಧಿಸುವ ಅಧಿಕಾರಿ ಹಾಗೂ ಕಲಾ ನಿರ್ದೇಶಕರು ಮಂಡಿಸುತ್ತಾರೆ. ಆರೇಳು ಸಭೆ ನಡೆಸಿ, ಕೊನೆಗೆ ಅಂತಿಮವಾಗಿ ಸ್ತಬ್ಧಚಿತ್ರ ಆಯ್ಕೆಯಾಗಿರುವ ಕುರಿತು ಸೂಚಿಸಿದ ನಂತರ ಸ್ತಬ್ಧಚಿತ್ರ ನಿರ್ಮಾಣ ಕಾರ್ಯವು ರಕ್ಷಣಾ ಮಂತ್ರಾಲಯದ ರಾಷ್ಟ್ರೀಯ ರಂಗ ಶಾಲಾ ಶಿಬಿರದಲ್ಲಿ ಪ್ರಾರಂಭಗೊಳ್ಳುತ್ತದೆ.

ಶಿವಮೊಗ್ಗದ ರಂಗಾಯಣದ 12 ಕಲಾವಿದರು ಸ್ತಬ್ಧಚಿತ್ರದೊಂದಿಗೆ ಭಾಗವಹಿಸಿದ್ದು, ಪ್ರಸಿದ್ಧ ಕಲಾ ನಿರ್ದೇಶಕ ಶಶಿಧರ ಅಡಪ ಅವರು ವಿನ್ಯಾಸ ಮಾಡಿರುವ ಈ ಸ್ತಬ್ಧಚಿತ್ರಕ್ಕೆ, ಖ್ಯಾತ ಸಂಗೀತಗಾರ ಪ್ರವೀಣ್ ಡಿ. ರಾವ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಸ್ತಬ್ಧಚಿತ್ರವು ಸುಂದರವಾಗಿ ಮೂಡಿ ಬರಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಡಾ ಪಿ.ಎಸ್. ಹರ್ಷ ಅವರ ಅಮೂಲ್ಯ ಸಲಹೆ ಸಕಾಲಿಕ ಮಾರ್ಗದರ್ಶನ ಇದೆ.

ಪ್ರತಿ ವರ್ಷ ನಡೆಯುವ ಗಣರಾಜ್ಯೋತ್ಸವ ಸಂದರ್ಭದಲ್ಲಿ ಕೇಂದ್ರಾಡಳಿತ ಪ್ರದೇಶಗಳೂ ಒಳಗೊಂಡಂತೆ 17 ರಾಜ್ಯಗಳಿಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ. ಕಳೆದ 12 ವರ್ಷಗಳಿಂದ ಕರ್ನಾಟಕವು ಸತತವಾಗಿ ಆಯ್ಕೆಯಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

***ಕರ್ನಾಟಕ ವಾರ್ತಾ ಕೇಂದ್ರ,***
***ನವದೆಹಲಿ***

# ಚೌಕೀಮಠ ಅವರ 'ಮಹಾಗುರುವಿನ ಗುರು' ಕೃತಿ ಬಿಡುಗಡೆ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀಕಂಠ ಚೌಕೀಮಠ ಅವರ 'ಮಹಾಗುರುವಿನ ಗುರು' ಕೃತಿಯು ಅಣ್ಣಿಗೇರಿಯ ತೋಂಟದಾರ್ಯ ಮಠದಲ್ಲಿ ಬಿಡುಗಡೆಗೊಂಡಿತು. ಮಹಾಗುರುವಿನ ಗುರು ಲಿಂ. ಯಳಂದೂರು ಬಸವಲಿಂಗ ಶಿವಯೋಗಿಗಳ ಜಾಗೃತ ಗದ್ದುಗೆ ತೋಂಟದಾರ್ಯ ಮಠದಲ್ಲಿರುವುದು ನಮ್ಮೆಲ್ಲರ ಭಾಗ್ಯ ಎಂದು ಆಶೀರ್ವಚನದಲ್ಲಿ ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು ತಿಳಿಸಿದರು.

ಸಮಾರಂಭದಲ್ಲಿ ಭೈರನಟ್ಟಿ ಶಾಂತಲಿಂಗ ಸ್ವಾಮಿಗಳು, ದಾಸೋಹ ಮಠದ ಶಿವಕುಮಾರಸ್ವಾಮಿಗಳು, ನೀಲಗುಂದ ಪ್ರಭು ಸ್ವಾಮಿಗಳು ಮಾತನಾಡಿದರು. ಬಸವಲಿಂಗ ಸ್ವಾಮಿಗಳ ಕ್ರಿಯಾ ಸಮಾಧಿ ನವೀಕರಣ ಮತ್ತು ಪಂಚಲೋಹದ ಮೂರ್ತಿ ಮಾಡಿಸಿದ ಲೇಖಕ ಶ್ರೀಕಂಠ ಚೌಕೀಮಠ ಹಾಗೂ ಮಂಗಲಾದೇವಿ ಚೌಕೀಮಠ ದಂಪತಿಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ದೆಹಲಿಯ ಮಹೇಶ ಕೋಳಿವಾಡ ಅವರು ಸಮಾರಂಭದಲ್ಲಿ ಭಾಗವಹಿಸಿದರು.





**ಹಾವೇರಿ ಶ್ರೀ ಹುಕ್ಕೇರಿ ಮಠದ ಪರಮಪೂಜ್ಯ ಲಿಂ. ಶ್ರೀ ಮ.ನಿ.ಪ್ರ. ಶಿವಬಸವ ಮಹಾಶಿವಯೋಗಿಗಳವರ 75ನೇ ಹಾಗೂ ಪರಮಪೂಜ್ಯ ಲಿಂ. ಶ್ರೀ ಮ.ನಿ.ಪ್ರ. ಶಿವಲಿಂಗ ಮಹಾಶಿವಯೋಗಿಗಳವರ 12ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ನಾಡು ನುಡಿ ಸಂಸ್ಕೃತಿಗೆ ಸಲ್ಲಿಸಿದ ಸೇವೆಗಾಗಿ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀಕಂಠ ಚೌಕೀಮಠ ಮತ್ತು ಶ್ರೀಮತಿ ಮಂಗಲಾದೇವಿ ಚೌಕೀಮಠ ಅವರಿಗೆ ಗೌರವ ಅಭಿನಂದನಾ ಪುರಸ್ಕಾರ ನೀಡಲಾಯಿತು. ಪರಮಪೂಜ್ಯ ಮ.ನಿ.ಪ್ರ. ಮಹಾಸ್ವಾಮಿಗಳು ಪ್ರಶಸ್ತಿ ಪ್ರದಾನ ಮಾಡಿದರು. ಶ್ರೀಕಂಠ ಚೌಕೀಮಠ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಶುಭಾಶಯಗಳು.**

# ಚಿತ್ರರಂಗಕ್ಕೆ ಪ್ರತಿಭಾವಂತ ಗಾಯಕ ಚಿದಂಬರ ಕೋಟೆ

ಸಂಗೀತ ಕ್ಷೇತ್ರ ಮತ್ತು ಸಿನೇಮಾ ರಂಗದಲ್ಲಿ ಸಾಫ್ಟ್‌ವೇರ್ ಉದ್ಯಮಿಗಳು, ಇಂಜಿನಿಯರುಗಳು, ಅಧ್ಯಾಪಕರು, ಸರಕಾರಿ ನೌಕರರು, ಹೋಟೆಲ್ ಉದ್ಯಮಿಗಳು ಮತ್ತು ರಿಯಲ್ ಎಸ್ಟೇಟ್ ಉದ್ಯಮಿಗಳವರಗೆ ತೊಡಗಿಸಿಕೊಂಡ ಸಾಧಕರಿದ್ದಾರೆ. ಕಲೆ ಯಾವುದಾದರೂ ರೂಪದಲ್ಲಿ ಎಲ್ಲರನ್ನು ಕೈಬೀಸಿ ಕರೆಯುತ್ತದೆ. ಅದರಂತೆ ದೆಹಲಿ ಕನ್ನಡಿಗ, ಗಾಯಕ ಚಿದಂಬರ ಕೋಟೆ ಹಿನ್ನೆಲೆ ಗಾಯಕರಾಗಿ ಚಿತ್ರರಂಗ ಪ್ರವೇಶಿಸಿದ್ದಾರೆ. ಅವರು ವಾಸು ಮತ್ತು ಶೇಖರ್ ನಿರ್ಮಾಣದ, ಧನ ಸುಬ್ರಹ್ಮಣ್ಯಂ ನಿರ್ದೇಶನದ ಹೊಸ ಚಿತ್ರ 'ಒನ್ ಡೇ ಲವ್' ಚಿತ್ರದಲ್ಲಿ ಹಾಡಲಿದ್ದಾರೆ. ಈ ಚಿತ್ರದಲ್ಲಿ ಯುವನಟ ಕಾರ್ತಿಕ್ ನಾಯಕ ನಟನಾಗಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಚಿದಂಬರ ಕೋಟೆ ವೃತ್ತಿಯಲ್ಲಿ ಐಟಿ ಉದ್ಯಮಿಯಾದರೂ ಪ್ರವೃತ್ತಿಯಲ್ಲಿ ಸಂಗೀತ, ಸಿನೇಮಾ ಹಾಗೂ ನಾಟಕ ರಂಗದಲ್ಲಿ ಬಾಲ್ಯದಿಂದಲೂ ಅಭಿರುಚಿಯುಳ್ಳವರು. ಬಾಲ್ಯ, ಯವ್ವನ ಬಡತನದಲ್ಲಿಯೇ ಕಳೆದ ಇವರಿಗೆ ಭಾವನೆಗಳೇ ಬದುಕಾಗಿ ಅದು ಸಾಹಿತ್ಯದ ರೂಪದಲ್ಲಿ ಆಗಾಗ ಹೊರಬರುತ್ತಿತ್ತು. ಸಮಯವಿದ್ದಾಗಲೆಲ್ಲಾ ಕ್ಯಾಸೆಟ್‌ಗಳನ್ನು ಕೊಂಡು ಅಥವಾ ಬಾಡಿಗೆ ಪಡೆದು ಹಾಡುಗಳನ್ನು ಕೇಳುವ ಹವ್ಯಾಸ. ತಾವೇ ಬರೆದ ಸಾಹಿತ್ಯಗಳಿಗೆ ರಾಗ ಸಂಯೋಜನೆ ಮಾಡಿ ಹಾಡುವ ಅವಕಾಶವಿದ್ದಾಗ ಹಾಡಿ ತಮ್ಮ ಮನದಾಸೆ ಪೂರೈಸಿಕೊಳ್ಳುತ್ತಿದ್ದರು.

ನಾದಬ್ರಹ್ಮ ಹಂಸಲೇಖಾ, ಸಂಗೀತ ಸಾಮ್ರಾಟ್ ಇಳೆಯರಾಜಾ ಹಾಗೂ ಯುವ ಜನತೆಯ ಸ್ಪೂರ್ತಿಯ ಸಂಗೀತ ಮಾಂತ್ರಿಕ ಎ.ಆರ್. ರಹಮಾನ್ ಇವರ ನೆಚ್ಚಿನ ಸಂಗೀತ ನಿರ್ದೇಶಕರು. 1998ರಲ್ಲಿ ಡಿಪ್ಲೋಮಾ ಮುಗಿಸಿ ಹೊರಬಂದಾಗಲೇ ಮೊಟ್ಟ ಮೊದಲ ಬಾರಿಗೆ ಸಿನೇಮಾ-ಕಥೆ-ಚಿತ್ರಕಲಾವಿದರಾಗಲು ಪ್ರಯತ್ನ ಮಾಡಿದ್ದರು. 1998ರಲ್ಲಿ ಬೆಂಗಳೂರಿಗೆ ಬಂದ ಹೊಸದರಲ್ಲಿ ಚಲನಚಿತ್ರರಂಗದಲ್ಲಿ ಅವಕಾಶ ವಿಫಲವಾದಾಗ ಭಾರತ್ ಇಲೆಕ್ಟ್ರಾನಿಕ್ಸ್‌ನಲ್ಲಿ ಅಪ್ರೆಂಟೀಸ್ ಆಗಿ ಸೇರಿ ಬಿ.ಇ.ಎಲ್. ನಾಟಕೋತ್ಸವದಲ್ಲಿ ಶಿವನಂಜೇಗೌಡರ ನಿರ್ದೇಶನದ 'ಇಬ್ಬನಿ ಕರಗಿತು' ನಾಟಕದಲ್ಲಿ ರಂಗ ಪ್ರವೇಶ ಮಾಡಿದರು. ನಂತರ ವೃತ್ತಿ ಜೀವನಕ್ಕೆ ಜಾಸ್ತಿ ಪ್ರಾಮುಖ್ಯತೆ ಕೊಟ್ಟರೂ ಸಂಗೀತ ಸಾಹಿತ್ಯದಿಂದ ದೂರವಿರಲಾಗಲಿಲ್ಲ. 2007ರಲ್ಲಿ ದೆಹಲಿಯ ಗುರುಗ್ರಾಮಕ್ಕೆ ತೆರಳಿದ ನಂತರ ದೆಹಲಿ ಕರ್ನಾಟಕ ಸಂಘ, ಚಂಡೀಗಢ, ಗುರುಗ್ರಾಮ ಕರ್ನಾಟಕ ಸಂಘದಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಹಾಡಿ ಅಲ್ಲಿಯ ಸಾಂಸ್ಕೃತಿಕ



ಚಟುವಟಿಕೆಗಾಗಿ 'ಗಂಧರ್ವ' ನವದೆಹಲಿಯ ಮುಖ್ಯ ಸದಸ್ಯನಾಗಿ ಸಾಂಸ್ಕೃತಿಕ ಸೇವೆ ಸಲ್ಲಿಸುತ್ತಿದ್ದಾರೆ.

ದೆಹಲಿಯಲ್ಲಿ ನಡೆದ ಕೆಲವು ಪ್ರಮುಖ ನಾಟಕಗಳಲ್ಲಿ ನಿರ್ದೇಶಕರಾದ ಬಾಲಕೃಷ್ಣ ನಾಯಕ್ ಹಾಗೂ ಶಿವಾನಂದ ಇಂಗಳೇಶ್ವರ ಅವರೊಂದಿಗೆ ಹಿಮ್ಮೇಳದಲ್ಲಿ ಗಾಯನ ಹಾಗೂ 'ಅಂತಿಗೊನೆ' ನಾಟಕದಲ್ಲಿ ಚಿಕ್ಕ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ದೆಹಲಿಯ ಮಂಡಿಹೌಸ್‌ನಲ್ಲಿ ನಡೆದ "Understanding Cinema" ಮೂರು ದಿನದ ಕಾರ್ಯಾಗಾರ ನಡೆಸಿಕೊಟ್ಟರು. ಸಂದೀಪ್ ಆರ್ಯ ಹಾಗೂ ಕಿರಣ್ ಆರ್ಯ ದಂಪತಿಗಳೊಡನೆ ಒಡನಾಟ ಇದೆ. ಪುಣೆಯ ಹೆಸರಾಂತ ಚಲನಚಿತ್ರ ಸಂಸ್ಥೆಗಳಿಂದ ನಡೆದ ಕಾರ್ಯಾಗಾರದಲ್ಲಿ ಪ್ರಶಸ್ತಿ ಪತ್ರ ಪಡೆದಿದ್ದಾರೆ.

ಇತ್ತೀಚೆಗೆ ಲೇಖಕ ಎನ್. ಶೇಖರ್‌ರವರ 'ಬತ್ತದ ನದಿ' ಕವನ ಸಂಕಲನಕ್ಕೆ ರಾಗ ಸಂಯೋಜನೆ ಮಾಡುತ್ತಿರುವ ಚಿದಂಬರ ಕೋಟೆ ಅವರು ತಮ್ಮ ಬಳಿ ಇರುವ ಕೆಲವು ಸಾಹಿತ್ಯಗಳಿಗೂ ಕೂಡ ಸಂಗೀತ ಸಂಯೋಜನೆ ಮಾಡಿ ಅದು ಶೀಘ್ರದಲ್ಲಿಯೇ ಹೊರಬರುವ ಸಾಧ್ಯತೆ ಇದೆ.

ಸಂಗೀತ, ಸಿನೇಮಾ ಮಾತ್ರವಲ್ಲದೆ, ಹಾಸ್ಯ, ಕ್ರೀಡೆ, ಛಾಯಾಗ್ರಹಣ, ಅಡಿಗೆ ತಿರುಗಾಟ ಇತ್ಯಾದಿ ಆಸಕ್ತಿ ಬಹುಮುಖ ಇರುವ ಈ ಯುವ ಪ್ರತಿಭೆಗೆ ಚಿತ್ರರಂಗ ಹಾಗೂ ಸಿನೇಮಾ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಹೆಚ್ಚು ಅವಕಾಶ ಸಿಗಲಿ.

ನೀರಜ್ ಮೆಹ್ರಾರೊಡನೆ ವಿಜ್ಞಾಪನೆಗಳಿಗೆ ಹಿನ್ನೆಲೆ ಧ್ವನಿ ಮುದ್ರಣ, ಸಿನೇಮಾ ಹಾಡುಗಳಿಗೆ ಸಾಹಿತ್ಯ, ರಾಗ ಸಂಯೋಜನೆ ಹಾಗೂ ಗಾಯನ, ಆಲ್ಬಂ ಹಾಡುಗಳಿಗೆ ಸಂಗೀತ ಸಂಯೋಜನೆ ಮತ್ತು ಇನ್ನೂ ಹೆಸರಿಡದ ಚಿತ್ರ ಒಂದರಲ್ಲಿ ಡ್ರೈವರ್ ಪಾತ್ರದಲ್ಲಿ ಚಿದಂಬರ ಕೋಟೆ ಕಾಣಿಸಲಿದ್ದಾರೆ.


ಪ್ರಸ್ತುತ Rapstar ಗಜೇಂದ್ರ ಗುರು ಅವರ "ಸಕತ್ತಾಗವ್ಳೆ" ಹಾಡಿಗೆ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಇವರ ಎಲ್ಲಾ ಸಾಹಿತ್ಯ ಹಾಗೂ ರಾಗ ಸಂಯೋಜನೆಗೆ ಸಂಗೀತ, ವಾದ್ಯಗೋಷ್ಠಿಗಳ ಪ್ರೋಗ್ರಾಂ ಮಾಡುತ್ತಿರುವುದು ಖ್ಯಾತ ಗಾಯಕಿ ಶ್ರೀಮತಿ ಕುಶಲ.

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಹಾಗೂ ಆಜೀವ ಸದಸ್ಯ, ಕಲಾವಿದ ಟಿ.ಎಸ್. ರಮೇಶ್ ಅವರ ಪ್ರೋತ್ಸಾಹವನ್ನು ಚಿದಂಬರ ಕೋಟೆ ನೆನೆಯುತ್ತಾರೆ. ಖ್ಯಾತ ಗಾಯಕ ರಾಮಚಂದ್ರ ಹಡಪದ ಅವರೇ ನಮ್ಮ ಗುರುಗಳು ಎನ್ನುವ ಬಹುಮುಖ ಪ್ರತಿಭೆಯ ಚಿದಂಬರ ಕೋಟೆ ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

***ಪೂಜಾ ರಾವ್***



## ಓದುಗರ ಸ್ಪಂದನ




ಡಿಸೆಂಬರ್ ತಿಂಗಳಿನ 'ಅಭಿಮತ' ಬಂದು ತಲುಪಿತು. ಮೊದಲಿನ ಹಾಗೆಯೇ ಅಭಿಮತದಲ್ಲಿ ಸಂಪಾದಕೀಯ, ಅಭಿನಂದನೆ, ವಾರ್ತೆ, ನಾಟ್ಯ, ಸಂಗೀತ ಇತ್ಯಾದಿ ವಿಷಯಗಳಿಂದ ತುಂಬಿ ತುಳುಕಿದೆ.

ಕೊರೊನಾದಿಂದ ಕೆಲವು ತಿಂಗಳು ಅಭಿಮತ ಅಂಚೆಯ ಮೂಲಕ ಬರದಿದ್ದರೂ ಈಗ ಸಂಘದ ಪದಾಧಿಕಾರಿಗಳು ಸದಸ್ಯರು ಹಲವಾರು ಕಾರ್ಯಕ್ರಮ ಮಾಡಿದ್ದಾರೆ. ಮಾಡುತ್ತಾ ಇದ್ದಾರೆ. ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ, ಗೀತಗಾಯನ ಇದಕ್ಕೆ ಉದಾಹರಣೆ.

ಇದು ಅಭಿನಂದನೀಯ.


***ಪ.ವೆಂ. ನಾಯಕ***

ಕೃತಿ ಸಮೀಕ್ಷೆ

# ಮಂದ ಮಾರುತದ ಪರಿಯ 'ನವೋನ್ಮೇಷ'

ನನಗೆ ಗುರುಸಮಾನರಾದ ಮತ್ತು ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಶ್ರೀ ಬಿ.ಆರ್ ಲಕ್ಷಣ ರಾವ್ ಅವರ ಇತ್ತೀಚಿನ ಮತ್ತು ಒಂಬತ್ತನೆಯ ಕವನ ಸಂಕಲನ 'ನವೋನ್ಮೇಷ' ವನ್ನು ದೆಹಲಿ ಕನ್ನಡಿಗರಿಗೆಲ್ಲ ಪರಿಚಯ ಮಾಡಿಕೊಡುವ ಉದ್ದೇಶ ಈ ಪುಟ್ಟ ಲೇಖನದ್ದು. ನನ್ನ ವಿಧ್ಯಾರ್ಥಿ ಜೀವನದ ಕಾಲದಿಂದ ನಾನು ಶ್ರೀ ಲಕ್ಷಣ ರಾವ್ ಅವರ ಕಾವ್ಯದ ಸವಿಯನ್ನು ಉಣ್ಣುತ್ತ ಬಂದವನು. ಕಾಲೇಜಿನಲ್ಲಿ ನನ್ನ ಪ್ರೀತಿಯ ಗುರುಗಳಾಗಿದ್ದ ಕನ್ನಡದ ಪ್ರಸಿದ್ಧ ಕವಿವರ್ಯರಾದ ಡಾ. ಎಚ್ ಎಸ್ ವೆಂಕಟೇಶಮೂರ್ತಿಯವರಿಗೆ ಅವರು ಆಪ್ತರು. ಅವರೆಲ್ಲರೂ ಆಗಿನ ಕಾಲದಲ್ಲಿ ತಮ್ಮ ಸಾಹಿತ್ಯದ ಕಾಳಜಿಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡ ಬಗೆ ಮತ್ತು ಪ್ರಕ್ರಿಯೆಗಳನ್ನು ಹತ್ತಿರದಿಂದ ಗಮನಿಸುವ (ಮತ್ತು ಅದನ್ನು ನನ್ನದಾಗಿಸಿಕೊಳ್ಳುವ) ಭಾಗ್ಯ ನನ್ನದಾಗಿತ್ತು. ನಂತರದಲ್ಲಿ ಹಲವು ಕಾಲ ಕನ್ನಡ ನಾಡಿನಿಂದ ಓದಿನ ಮತ್ತು ಉದರನಿಮಿತ್ತ ದೂರವುಳಯುವುದು ಅನಿವಾರ್ಯವಾದರೂ ಅವರೊಂದಿಗಿನ ಭೇಟಿ ಮತ್ತು ಸಾಹಿತ್ಯ ಪ್ರಪಂಚದ ಒಡನಾಟ ಈ ಎಲ್ಲ ಕಾಲದಲ್ಲೂ ನಿರಂತರವಾಗಿ ಸಾಗಿದೆ. ನಮ್ಮ ಸಾಹಿತ್ಯ ಪ್ರಪಂಚದ ಈ ಆಲದ ಮರಗಳ ಅಡಿಯಲ್ಲಿ ಪುಟಾಣಿ ಸಸಿಗಳಾಗಿ ನಾವು ಬೆಳೆದು ಬಂದ ಪರಿ ಮತ್ತು ದಾರಿ ಮನಸಿಗೆ ಈಗಲೂ ಮುದ ನೀಡುತ್ತದೆ. ಕೋಲಾರದ ಚಿಂತಾಮಣಿಯಲ್ಲಿ ತಮ್ಮ ಬದುಕಿನ ಬೇರುಗಳನ್ನು ಬಿಟ್ಟ ಲಕ್ಷಣ ರಾವ್ ಅವರು ಈಗ ಕಳೆದ ಹತ್ತು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಈ ಎಲ್ಲ ಕಾಲದಲ್ಲೂ ಅವರ ಕಾವ್ಯ ಪ್ರಪಂಚ ವಿಸ್ತಾರವಾಗುತ್ತ ಮತ್ತೂ ಗಹನವಾಗುತ್ತ ಸಾಗುವುದನ್ನು ನಾನು ವಿಸ್ಮಯದಿಂದ ಕಂಡಿದ್ದೇನೆ. ಈ 'ನವೋನ್ಮೇಷ' ವೂ ಇದಕ್ಕೆ ಹೊರತಲ್ಲ.

ಭಾವಗೀತೆಯ ಪ್ರಪಂಚದಲ್ಲಿ ವಿಹರಿಸುವರಿಗೆಲ್ಲ ತಮ್ಮ ಹಲವಾರು ಕವನಗಳಿಂದ ಚಿರಪರಿಚಿತರಾಗಿರುವ ಅವರು ಪ್ರೀತಿಯಿಂದ ತಮ್ಮ ಕವನ ಸಂಕಲನದ ಪ್ರತಿಗಳನ್ನು ದೆಹಲಿ ಕರ್ನಾಟಕ ಸಂಘದ ಗ್ರಂಥ ಭಂಡಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಜಾಲತಾಣದ ಮೂಲಕ ಅಕ್ಟೋಬರ 2020 ರಲ್ಲಿ ನಡೆದ ಅವರ ಕವನ ಸಂಕಲನದ ಬಿಡುಗಡೆಯ ಕಾರ್ಯಕ್ರಮಕ್ಕೆ ನಮಗೆಲ್ಲ ಅತ್ಮೀಯವಾದ ಅಮಂತ್ರಣವನ್ನು ಅವರು ಕಳುಹಿಸಿಕೊಟ್ಟಿದ್ದರು. ಈಗ ನಿಧಾನವಾಗಿ ಆವಿಯಂತೆ ಕರಗುತ್ತಿರುವ ಕೊರೊನಾದ ಸಂಕಷ್ಟದ ಸಮಯದಲ್ಲಿ ಅವರ ಈ ಮಹತ್ವಪೂರ್ಣವಾದ ಕವನ ಸಂಕಲನ ಹೊರಬರುತ್ತಿರುವುದು ಹಲವಾರು ಬಗೆಗಳಲ್ಲಿ ಸಾಂದರ್ಭಿಕವಾದದ್ದು. ದೆಹಲಿ ಕರ್ನಾಟಕ ಸಂಘದ ಹಲವಾರು ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿದ್ದನ್ನು ನಾವು ಇಲ್ಲಿ ನೆನೆಪಿಸಿಕೊಳ್ಳಬೇಕು. ಅವರ 'ಅಮ್ಮ ನಿನ್ನ ಎದೆಯಾಳದಲ್ಲಿ' ಕವಿತೆಯನ್ನು (ಮತ್ತು ಇನ್ನೂ ಹಲವಾರು ಪ್ರಸಿದ್ಧ ಕವಿತೆಗಳನ್ನು) ನಮ್ಮ ದೆಹಲಿಯ ಕಲಾವಿದರು ಬಾರಿ ಬಾರಿ ಹಾಡಿದ್ದನ್ನೂ ನಾವು ನೆನೆಸಿಕೊಳ್ಳಬೇಕು.




| | |
|---|---|
| ಪ್ರಕಾಶಕರು | : ಅಂಕಿತ ಪುಸ್ತಕ, ಬೆಂಗಳೂರು |
| ಪುಟಗಳು | : 140 |
| ಬೆಲೆ | : ರೂ. 130/- |
| ವರ್ಷ | : 2020 |

ಕಳೆದ ಐದು ದಶಕಗಳಿಂದ ಸಾಹಿತ್ಯ ಲೋಕದಲ್ಲಿ ತಮ್ಮ ಕವಿತೆ ಮತ್ತು ಬರವಣಿಗೆಗಳ ಮೂಲಕ ವಿಹರಿಸುತ್ತಿರುವ ಲಕ್ಷಣ ರಾವ್ ಅವರು ಕಾವ್ಯದ ಸಂದರ್ಭದಲ್ಲಿ ತಮ್ಮದೆ ಆದ ದಾರಿಯನ್ನು ಕಂಡುಕೊಂಡವರು. ದಿನನಿತ್ಯದ ಬದುಕಿನಲ್ಲಿ ನಾವು ಕಾಣುವ ಪ್ರೀತಿ, ಮುನಿಸು, ತುರಿಸು, ಪ್ರಣಯ, ಲಾಲಸೆ...ಹೀಗೆ ಈ ಎಲ್ಲ ಭಾವಗಳನ್ನು ನಮ್ಮ ಭವದಾಚೆಗಿಟ್ಟು ನೋಡುವ ಹಂಬಲ ಅವರದ್ದು. ಅವರ ಕಾವ್ಯ ಪಯಣ 'ಗೋಪಿ ಮತ್ತು ಗಾಂಡಲೀನ' (1971) ಕವನ ಸಂಕಲನದೊಂದಿಗೆ ಪ್ರಾರಂಭವಾಗಿ ಈಗ 'ನವೋನ್ಮೇಷ'ದ ತನಕ ಸಾಗಿದೆ. ಅವರ ಪ್ರಸಿದ್ಧ ಕವನಗಳ ಪಾತ್ರಗಳು ಮತ್ತೆ ಈ ಸಂಕಲನದಲ್ಲಿ ಅವರೊಂದಿಗೆ (ನಮ್ಮೊಂದಿಗೆ) ಮುಖಾಮುಖಿಯಾಗುವುದು ಬದುಕಿನ ಸೃಜನಶೀಲ ಮಜಲುಗಳನ್ನು ನಮ್ಮೆದುರು ತೆರೆದಿಡುತ್ತದೆ. ಅವರು ಹಲವಾರು ದಶಕಗಳ ಹಿಂದೆ ಬರೆದ ಪ್ರಸಿದ್ಧ ಕವನದ 'ಲೋಲೀಟ' (ಟುವಟಾರ ಸಂಕಲನದಿಂದ) ಈಗ 'ಮತ್ತೆ ಲೋಲೀಟ'ಳಾಗಿ ಬರುತ್ತಿದ್ದಾಳೆ. ಕವಿ ನೆನೆಪಿಸುವಂತೆ 'ನಿಮಗೆ ನೆನಪಿದೆಯ ನನ್ನ 'ಲೋಲೀಟಾ', ಆ ದೊರೇಗಾಯಿ ಹುಡುಗಿ' ನನ್ನ ಯೌವನದ ಆ ದಿನಗಳಲ್ಲಿ ಹ್ರದಯ ಕದ್ದ ತುಡುಗಿ" ಈಗ ಮತ್ತೆ ಬಂದ ನಿತ್ಯ ಕನ್ಯೆ 'ಲೋಲೀಟಾ'ಳನ್ನು ಬದುಕಿನ ವಿಸ್ತ್ರತವಾದ ಸ್ಥಿತ್ಯಂತರಗಳಲ್ಲಿ ಕಾಣುವ ರೀತಿಯನ್ನು ಕವಿ ಪಡಿಮೂಡಿಸಿರುವ ರೀತಿ... ನನಗುಳಿದಿರುವುದು ನಿನ್ನೆಗಳಷ್ಟೆ, ನಿನಗಿವೆ ನಾಳೆಗಳು; ಮುಗಿದಿದೆ ಪುಸ್ತಕ, ನನಗುಳಿದಿಲ್ಲ ಬರೆಯಲು ಹಾಳೆಗಳು'. ಆದರೆ, ಲಕ್ಷಣರಾವ್ ರವರ ಕವಿತೆಗಳು ಹೀಗೆ ಮುಗಿಯುವುದಿಲ್ಲ. 'ಲೋಲೀಟಾ' ಕೊಡುವ 'ಇನ್ನೊಂದು ನೋಟ್ಬುಕ್ಕು'... ಕವಿಗೆ ಎಚ್ಚರವಾದಾಗ ನಿಜವಾಗಿಯೂ ಟೇಬಲ್ ಮೇಲೆ ನೋಟ್ಬುಕ್ಕು, ಜೊತೆಗೆ ತೆರೆದುಕೊಂಡ ಹಾಳೆ. ಇದು ಅವರ ಬದುಕಿನತ್ತ ಮತ್ತು ಸೃಜನಶೀಲ ಮನಸ್ಸಿನತ್ತ ಇರುವ ಜೀವನದೃಷ್ಟಿಯನ್ನು ಸೂಕ್ಷ್ಮವಾಗಿ ನಮ್ಮ ಮುಂದಿಡುತ್ತದೆ. ಹೀಗಾಗಿ ಕವಿ ಲಕ್ಷಣ ರಾವ್ ಅವರನ್ನು ಈ ಒಂದು ಕವನ ಸಂಕಲನದ ಸಂದರ್ಭದಲ್ಲಿ ನೋಡುವುದು ಅಸಾಧ್ಯವಾಗಿ ಬಿಡುತ್ತದೆ. ಕಾಲನ ನಡಿಗೆಯ ಮೇಲೆ ಅವರ ಕವನಗಳ ಒಳಮರ್ಮದ ನರ್ತನ ಸಹಜವಾಗಿ ಸದಾ ನಡೆಯುತ್ತಿರುವುದನ್ನು ನಾವು ಕಾಣಬಹುದು.

ಅವರ 'ಹಿನ್ನೋಟದ ಕನ್ನಡಿ' ಕವಿತೆಯಲ್ಲಿ ಮಾಗಿದ ಬದುಕಿನ ದೃಷ್ಟಿಕೋನವನ್ನು ಅವರು ಅಳೆದಳೆದು ನಮ್ಮೆದುರು ಸರಳವಾಗಿ ಇಡುತ್ತಾರೆ. ಹರೆಯದ ದಿನಗಳಲ್ಲಿ ನಾವೆಲ್ಲರೂ ವಾಹನಗಳ ವೇಗದ ಗೊರಸಿಗೆ ಸಿಕ್ಕು 'ಎಲ್ಲರನ್ನೂ ಹಿಂದಿಕ್ಕಿ, ಮುನ್ನುಗ್ಗಿ, ಗುರಿಮುಟ್ಟುವ ತುರುಸಿ'ನಲ್ಲಿ ಬಿಡುವರಾಗಿದ್ದರೂ ಈಗ ಬದುಕು, ಮನಸು ಮಾಗಿದ ಹಾಗೆ 'ಈಗ ಚಾಲನೆ ಕೇವಲ ಖುಷಿಗಾಗಿ, ಸ್ಪರ್ಧೆಯಿಲ್ಲ, ಧಾವಂತವಿಲ್ಲ, ಸುಮ್ಮನೆ ಅವಲೋಕಿಸುತ್ತ, ನನ್ನದೆ ಗತಿಯಲ್ಲಿ...ಸಾಗಿದ್ದೆ ಗುರಿಯಾಗಿ ಸಾಗುವ ಸಲುವಾಗಿ'. ಇದು ನಾವೆಲ್ಲರೂ ಕವಿಯೊಂದಿಗೆ ಕಂಡುಕೊಳ್ಳುವ ಸತ್ಯ. ಈ ಕಾರಣಕ್ಕಾಗಿ ಲಕ್ಷಣ ರಾವ್ ಅವರ ಕವಿತೆಗಳು ನಮ್ಮ ಅನುಭವ ಮತ್ತು ಅನುಭಾವದ ಸೆಲೆಯಿಂದ ಹುಟ್ಟುವ ಕಾರಣದಿಂದಾಗಿ ನಮಗೆ ಆಪ್ತವಾಗಿ ಬಿಡುತ್ತವೆ.

ನಾಲ್ಕು ಭಾಗಗಳಲ್ಲಿ ಅವರ ಈ ಕವನ ಸಂಕಲನ ರೂಪಗೊಂಡಿದೆ. ಮೊದಲ ಭಾಗದ ಮೂವತ್ತೆರಡು ಕವನಗಳು ನವೋನ್ಮೇಷದ ಕವನಗಳಾದರೆ, ಎರಡು ಮತ್ತು ಮೂರನೇಯ ಭಾಗಗಳು 'ಪ್ರೀತಿಯ ರೀತಿ' ಮತ್ತು 'ಗೀತಗುಚ್ಚ' ವಾಗಿ ಹೊರಹೊಮ್ಮಿವೆ. ನಾಲ್ಕನೆಯ ಭಾಗದಲ್ಲಿ ಅನುವಾದಿತ ಕವಿತೆಗಳಿವೆ. ಈ ಸಂಕಲನಕ್ಕೆ ಕನ್ನಡದ ಸಾಹಿತ್ಯ ಪ್ರಪಂಚದ ಇನ್ನೊರ್ವ ಪ್ರಸಿದ್ಧ ಬರಹಗಾರರಾದ ಚಿಂತಾಮಣಿ ಕೊಡ್ಲೆಕೆರೆಯವರು ತುಂಬಾ ಉಪಯುಕ್ತವಾದ ಮುನ್ನುಡಿ ಬರೆದಿದ್ದಾರೆ. ಈ ಮುನ್ನುಡಿಯಲ್ಲಿ ಅವರು ಲಕ್ಷಣ ರಾವ್ ಅವರ ಬದುಕು, ಜೀವನದೃಷ್ಟಿ ಮತ್ತು ಕಾವ್ಯದ ಕಟ್ಟುವಿಕೆಯ ಪರಿಯನ್ನು ಈ ನವೋನ್ಮೇಷದ ಸಂದರ್ಭದಲ್ಲಿ ವಿಸ್ತಾರವಾಗಿ ವಿಶ್ಲೇಷಿಸಿದಾರೆ. ಅಲ್ಲಲ್ಲಿ ಮಳೆಯ ಹನಿಗಳಂತೆ ನಮ್ಮನ್ನಾವರಿಸುವ ವಾಗೀಶ ಹೆಗಡೆಯವರ ರೇಖಾಚಿತ್ರಗಳು ಮನಕ್ಕೆ ಮುದ ನೀಡುತ್ತವೆ.

ಕೊನೆಯಲ್ಲಿ ಲಕ್ಷಣ ರಾವ್ ಅವರ ನವೋನ್ಮೇಷವನ್ನು ನಿಧಾನವಾಗಿ ಸವಿಯಬೇಕು. ಅದರ ಆಶಯದ ಚೌಕಟ್ಟು ದೊಡ್ಡದು. ನಮ್ಮ ಅನುಭವಗಳ ಇತಿಮಿತಿಗಳಲ್ಲೆ ಈ ಚೌಕಟ್ಟನ್ನು ಬೇಕಾದ ಹಾಗೆ ವಿಸ್ತರಿಸಬಹುದು; ಸಂಕೀರ್ಣಗೊಳಸಬಹುದು. ಒಮ್ಮೆ ಓದಿ ನೋಡಿ.

***ಡಾ. ವೆಂಕಟಾಚಲ ಹೆಗಡೆ***

ಚಿಂತನೆ

# ಪರೀಕ್ಷಾ ಕಾಲ

ಪರೀಕ್ಷಾ ಕಾಲ ಬೇರೆ ಬೇರೆ ವಯಸ್ಸಿನ ಜನರಿಗೆ ಬೇರೆ ಬೇರೆಯಾಗಿರುತ್ತದೆ. ಇದನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಎದುರಿಸಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಮಾರ್ಚ್ ತಿಂಗಳಿನಲ್ಲಿ ಬರೆಯ ಬೇಕಾದ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ವರ್ಷವಿಡೀ ಚೆನ್ನಾಗಿ ತಯಾರಿ ನಡೆಸಿ ಪರೀಕ್ಷೆ ಬರೆಯುವವರು ಕೆಲವರಾದರೆ, ಆರಂಭದಲ್ಲಿ ಏನೂ ಓದದೇ ಕೊನೆಯ ಗಳಿಗೆಯ ತರಾತುರಿಯ ತಯಾರಿ ಕೆಲವರದು. ಕೊನೆಯ ಗಳಿಗೆಯ ತಯಾರಿ ಮಾಡುವ ವಿದ್ಯಾರ್ಥಿಗಳಿಗೆ ಅವಹೇಳನ ಮಾಡಬಾರದು. ಇದನ್ನು ಮಾಡಿದರೆ ಅವರ ಆತ್ಮ ವಿಶ್ವಾಸ ಕುಗ್ಗಿ ಹೋಗುವುದು. ಪೋಷಕರು ಅವರಿಗೆ ಪ್ರೋತ್ಸಾಹ ಕೊಡಬೇಕು ಹಾಗೂ ಅಧ್ಯಾಪಕರ ಮಾರ್ಗದರ್ಶನ ತೆಗೆದುಕೊಂಡು ಓದಲು ಹೇಳಬೇಕು. ಪರೀಕ್ಷಾ ಪರಿಣಾಮ ತಿಳಿದ ನಂತರ ಕೆಲವೊಂದು ಸಲ 90 ಶೇಕಡಾದ ಮೇಲೆ ಅಂಕ ಗಳಿಸಿದ ವಿದ್ಯಾರ್ಥಿಯ ಆತ್ಮಹತ್ಯೆಯ ಘಟನೆಗಳು ಕೇಳಿ ಬರುತ್ತವೆ ಹಾಗೂ ನೋವುಂಟು ಮಾಡುತ್ತವೆ. ಈ ಪರಿಸ್ಥಿತಿಗೆ ಕಾರಣರಾದವರು ಯಾರು ಎಂಬ ಸಂಶಯ ಮೂಡುತ್ತದೆ. ಪರೀಕ್ಷಾ ತಯಾರಿಗೆ ಒತ್ತು ನೀಡಬೇಕು. ಆದರೆ ಫಲಿತಾಂಶಗಳು ಚೆನ್ನಾಗಿ ಬಾರದ ವೇಳೆ ಪ್ರಪಂಚ ಮುಳುಗಿ ಹೋಗುವುದಿಲ್ಲ, ಆಧುನಿಕ ಪ್ರಪಂಚದಲ್ಲಿ ಹಲವಾರು ವಿಧದ ಅವಕಾಶಗಳು ಇವೆ ಎಂದು ತಿಳಿಸಿ ಹೇಳಬೇಕು. ಇದರೊಂದಿಗೆ ಮನೆಯಲ್ಲಿ ಶಾಂತ ವಾತಾವರಣ ಒದಗಿಸಬೇಕು.



ಕೊರೊನಾ ಕಾಲದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ಹಲವರಿಗೆ ಕೂಡಲೇ ನೌಕರಿ ಸಿಗದಿರಬಹುದು. ಈ ಸಮಯದಲ್ಲಿ ನಿಮ್ಮ ಪ್ರೀತಿಯ ಮಗ/ಮಗಳ ಬಗ್ಗೆ ನೀವಾಡುವ ಮಾತುಗಳನ್ನು ಬಹಳ ಯೋಚಿಸಿ ಆಡಬೇಕು. "ಇವನಿಗೆ ಇನ್ನೂ ಕೆಲಸವೇ ಸಿಗಲಿಲ್ಲ ಎಂದೆಲ್ಲಾ" ಹೇಳಿದರೆ ಅವರ ಮನಸ್ಸನ್ನು ಕುಗ್ಗಿಸುತ್ತದೆ. ಜೀವನದಲ್ಲಿ ಕಷ್ಟಗಳು ಬಂದಾಗ ಕೆಲವರು ಹೇಳುತ್ತಾರೆ, ಇದು ಪರೀಕ್ಷಾ ಕಾಲ ಎಂದು. ಜೀವನದ ಹಲವಾರು ಪರೀಕ್ಷೆಗಳನ್ನು ಎದುರಿಸಲು ಕಲಿಸುವ ಶಿಕ್ಷಣವು ಮುಂದಿನ ಪೀಳಿಗೆಗೆ ಅಗತ್ಯವಿದೆ ಹಾಗೂ ಈ ದಿಶೆಯಲ್ಲಿ ಪೋಷಕರೂ ಹಾಗೂ ಶಿಕ್ಷಕರೂ ಚಿಂತಿಸಬೇಕು. ಆಗಲೇ ಸಮಾಜದಲ್ಲಿ ಹೆಚ್ಚಾಗುತ್ತಾ ಇರುವ ಆತ್ಮಹತ್ಯೆ ಪ್ರಕರಣಗಳು ಕಡಿಮೆಯಾಗಬಹುದು.

***ಪ್ರೇಮಲತಾ ಬಿ.***

# ಕರ್ನಾಟಕ ಭವನದಲ್ಲಿ ಗಣರಾಜ್ಯೋತ್ಸವ ಆಚರಣೆ

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳಿಂದ ನಮ್ಮ ದೇಶ ಸ್ವತಂತ್ರಗೊಂಡಿದೆ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ನಮ್ಮ ದೇಶಕ್ಕೆ ವಿಶ್ವದಲ್ಲೇ ಅತಿ ಶ್ರೇಷ್ಠ ಸಂವಿಧಾನದ ಕೊಡುಗೆ ನೀಡಿದ್ದಾರೆ ಎಂದು ನವದೆಹಲಿಯಲ್ಲಿನ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ್ ಅವರು ಹೇಳಿದರು. ಇಲ್ಲಿನ ಸರ್ದಾರ ಪಟೇಲ್ ಮಾರ್ಗದಲ್ಲಿರುವ ಕರ್ನಾಟಕ ಭವನದಲ್ಲಿ ಹಮ್ಮಿಕೊಂಡಿದ್ದ 72ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಿದ್ದರು.

ಈ ಶುಭದಿನವು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಾಗೂ ಸಂವಿಧಾನ ಜಾರಿಗೆ ತರಲು ಶ್ರಮಿಸಿದ ಮಹನೀಯರ ಸ್ಮರಿಸಿಕೊಳ್ಳುವ ಸುಸಂದರ್ಭವಾಗಿದೆ. ಭಾರತ ಸಂವಿಧಾನವು ಪ್ರತಿಯೊಬ್ಬರಿಗೂ ಮೂಲಭೂತ ಹಕ್ಕುಗಳೊಂದಿಗೆ ಕರ್ತವ್ಯ ಗಳನ್ನು ನೀಡಿದೆ. ಡಾ. ಬಿ.ಆರ್ ಅಂಬೇಡ್ಕರ ಅವರು ಈ ದೇಶ ಹಾಗೂ ಸಮಾಜಕ್ಕೋಸ್ಕರ ಹಗಲಿರುಳು ಶ್ರಮಿಸಿದ್ದಾರೆ. ಮಹಾನ್ ವ್ಯಕ್ತಿಗಳಿಂದ ಪ್ರೇರಣೆ ಪಡೆದು ದೇಶದ ಅಭಿವೃದ್ಧಿ ಪಥದಲ್ಲಿ ಎಲ್ಲರೂ ತಮ್ಮ ಅಳಿಲು ಸೇವೆ ಸಲ್ಲಿಸಬೇಕು. ಕೋವಿಡ್-19ರ ಮಹಾಮಾರಿ ರೋಗಕ್ಕೆ ಲಸಿಕೆ ಕಂಡು ಹಿಡಿದು ಲಸಿಕೆ ತಯಾರಿಕಾ ಕಾರ್ಯ ಅದ್ಭುತವಾದ ಸಾಧನೆಯಾಗಿದೆ ಎಂದು ಹೇಳಿದರು.



ನಮಗೆಲ್ಲರಿಗೂ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸಂವಿಧಾನವನ್ನು ರಚನೆ ಮಾಡಿ, ಸಂವಿಧಾನದ ಮೂಲ ತತ್ವ ಆಧಾರದ ಮೇಲೆ ನಾವೆಲ್ಲರೂ ಜೀವನ ನಿರ್ವಹಣೆ ಮಾಡುವಂತಹ ಅವಕಾಶ ಕಲ್ಪಿಸಲಾಗಿದೆ. ಇದನ್ನು ಸಹ ಮೆಲುಕು ಹಾಕುವ ಮೂಲಕ ನಾವು ಮಾಡುವ ಕಾರ್ಯವನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ನವದೆಹಲಿಯ ಕರ್ನಾಟಕ ಭವನದ ವಿಶೇಷ ನಿವಾಸಿ ಆಯುಕ್ತ ವಿಜಯ ರಂಜನ್ ಸಿಂಗ್, ಉಪ ನಿವಾಸಿ ಆಯುಕ್ತ ಎಚ್. ಪ್ರಸನ್ನ, ಕರ್ನಾಟಕ ಭವನದ ಅಧಿಕಾರಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

***ಅಮರೇಶ***

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಗಣರಾಜ್ಯೋತ್ಸವ ದಿನಾಚರಣೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ 72ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಹಾಗೂ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವ್ಯವಸ್ಥಾಪಕ ಡಾ. ಎಂ.ಎಸ್. ಶಶಿಕುಮಾರ್ ಧ್ವಜಾರೋಹಣ ನೆರವೇರಿಸಿದರು. ಬಳಿಕ ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವವನ್ನು ಸಲ್ಲಿಸಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಇಂತಹ ಸಂಭ್ರಮಾಚರಣೆಯೊಂದಿಗೆ ಅದರ ಅರಿವಿನ ಅಗತ್ಯ ಇದ್ದಾಗ ಭಾವದೊಂದಿಗೆ ಜೀವವು ಪರಿಪೂರ್ಣಗೊಳ್ಳುತ್ತದೆ. ನಮ್ಮ ಹಿರಿಯರ ಹೋರಾಟದ ಫಲವಾಗಿ ನಾವು ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಆದರೆ ಅದು ಸರ್ವರನ್ನು ತಲುಪಿದ್ದು ಸಂವಿಧಾನದ ಮೂಲಕ. ಸಂವಿಧಾನವನ್ನು ತಿಳಿದುಕೊಳ್ಳುವುದರೊಂದಿಗೆ ನಮ್ಮ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಪಾಲಿಸುವುದರ ಮೂಲಕ ಈ ದೇಶವನ್ನು ಪ್ರೀತಿಸೋಣ, ಗೌರವಿಸೋಣ. ಮತ್ತು ದೇಶಕ್ಕಾಗಿ ಕೊಡುಗೆ ನೀಡಿದ ಮಹನೀಯರನ್ನು, ವಿಜ್ಞಾನಿಗಳನ್ನು ಸ್ಮರಿಸೋಣ ಎಂದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ನಿಕಟಪೂರ್ವ ಉಪಾಧ್ಯಕ್ಷ ರಾಮಮೂರ್ತಿ ಕೆ. ಆರ್. ಮುಖ್ಯ ಅತಿಥಿಯಾಗಿದ್ದರು. ಕಾರ್ಯಕಾರಿ ಸಮಿತಿ ಸದಸ್ಯೆ ಮಾಲಿನಿ ಪ್ರಹ್ಲಾದ್ ಉಪಸ್ಥಿತರಿದ್ದರು. ಪ್ರಾಂಶುಪಾಲ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ದೇಶಭಕ್ತಿಯನ್ನು ಮೂಡಿಸುವ ಕಾರ್ಯಕ್ರಮಗಳು, ಗಣರಾಜ್ಯೋತ್ಸವ ಹಾಗೂ ಸಂವಿಧಾನದ ಮಹತ್ವದ ಕುರಿತ ಭಾಷಣ ಮತ್ತು ದೇಶಭಕ್ತಿಗೀತೆಯು ಪ್ರಸ್ತುತಗೊಂಡಿತು. ಶಿಕ್ಷಕಿ ಬಿದಿಶಾ ಕಾರ್ಯಕ್ರಮ ನಿರ್ವಹಿಸಿದರು.

***ಅರವಿಂದ ಬಿಜ್ಜೈ***



# ಯಕ್ಷಗಾನದ ರೂಪಾಂತರಕ್ಕೆ ಮರುಚಿಂತನೆ ಅಗತ್ಯ

## - ಬಾ. ಸಾಮಗ

ಕರಾವಳಿಯಲ್ಲಿ ಜನಮೆಚ್ಚುಗೆ ಪಡೆದಿರುವ ಯಕ್ಷಗಾನವು ಈ ಕಾಲದ ನಮ್ಮ ಬದುಕಿನ ಧ್ಯೇಯ ಧೋರಣೆಗಳ ಅಭಿರುಚಿ ಇತ್ಯಾದಿಗಳನ್ನು ಪ್ರಭಾವಿಸುತ್ತಿದ್ದು ಯಕ್ಷಗಾನದ ಈಗಿನ ಬದಲಾವಣೆಗಳಿಗೆ ಕೇವಲ ಪ್ರೇಕ್ಷಕರನ್ನೋ, ಕಲಾವಿದರನ್ನೋ ಅಥವಾ ಸಂಯೋಜಕರನ್ನೋ ಬೈದು ಪ್ರಯೋಜನವಿಲ್ಲ ಅಲ್ಲದೆ ಈಗಿನ ಯಕ್ಷಗಾನವನ್ನು ಒಪ್ಪಿಕೊಳ್ಳೋಣವೇ, ಕಲೆ ಬದಲಾಗುತ್ತಿಯೆಂದು ಸುಮ್ಮನಿರೋಣವೇ ಅಥವಾ ಹಿಂದಿನ ಕಾಲದ ಯಕ್ಷಗಾನ ಸ್ವರೂಪವನ್ನು ರಂಗಭೂಮಿಯಲ್ಲಿ ಸ್ಥಾಪಿಸೋಣವೇ ಎಂದು ಮರುಚಿಂತನೆ ಮಾಡಬೇಕೆಂದು ದೆಹಲಿ ಕನ್ನಡಿಗ, ತುಳುವೆರ್ ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರು ಕರೆ ನೀಡಿದರು.

ಅವರು ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಕಲಾ ಸಂಘ ಜ. 23 ರಂದು ಉಡುಪಿ ಕೆಳಾರ್ಕಳಬೆಟ್ಟಿನಲ್ಲಿ ಏರ್ಪಡಿಸಿದ 13ನೇ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು. ಮರುಚಿಂತನೆ ಎನ್ನುವುದು ಸಾಹಿತ್ಯ ಪ್ರಕಾರದಲ್ಲಿ ಪ್ರಚಲಿತವಾಗಿರುವ ಪರಿಕಲ್ಪನೆಯಾಗಿದ್ದು ಇದನ್ನು ಯಕ್ಷಗಾನಕ್ಕೂ ಅನ್ವಯಿಸಿದರೆ ಯಕ್ಷಗಾನದ ರಸ ಸ್ಥಾನಗಳಲ್ಲಿ ಬದಲಾವಣೆ, ಪಲ್ಲಟ ವಾಗುತ್ತಿರುವುದು



ಗಮನಿಸಬಹುದು. ಕೆಲವು ವರ್ಷಗಳ ಹಿಂದೆ ಒಂದು ಯಕ್ಷಗಾನ ಪ್ರದರ್ಶನದಲ್ಲಿ ಸಮಗ್ರ ಕತೆಯ ಪ್ರಸ್ತುತಿ ಪಾತ್ರಗಳ ಸಂವಾದದಲ್ಲಿ ಪಾತ್ರ ವಿಮರ್ಶೆ, ಕಲೆಯ ಆಶಯಗಳ ಬಗ್ಗೆ ಚರ್ಚೆ ನಡೆಯುತ್ತಿದ್ದು ಪ್ರೇಕ್ಷಕನ ಮನಸ್ಸಿನಲ್ಲಿ ಕುಣಿತ ವೇಷಭೂಷಣಗಳ ಜತೆ ಕತೆಯ ಆಶಯ ಮನದಲ್ಲಿ ಉಳಿಯುತ್ತಿತ್ತು. ಆದರೆ ಇತ್ತೀಚೆಗೆ ಯಕ್ಷಗಾನವು ಪ್ರೇಕ್ಷಕರಿಗೆ ಏನನು ಕೊಡುತ್ತಿವೆ ಅಥವಾ ಪ್ರೇಕ್ಷಕರು ಏನನ್ನು ಬಯಸುತ್ತಾರೆ ಎನ್ನುವುದಕ್ಕಿಂತ ಕಣ್ಣು, ಕಿವಿಗಳಿಗೆ ಸಂತೋಷಕೊಡುವ ಕಲಾಖಂಡಗಳು ಮುಖ್ಯವೆಂದು ಕಾಣುತ್ತದೆ. ಒಂದು ಪದ್ಯಕ್ಕೆ ಸಾಂದರ್ಭಿಕ ಔಚಿತ್ಯ ಅಥವಾ ಅಗತ್ಯ ಇಲ್ಲದಿದ್ದರೂ 15-20 ನಿಮಿಷ ಕುಣಿಯುವುದು ಹಾಗೆಯೇ ಪದ್ಯದಲ್ಲಿ ರಾಗ ವಿಸ್ತಾರ, ವಿಲಂಬಿತ ಸ್ವರ ವಿಸ್ತಾರ ಇತ್ಯಾದಿಗಳಿಂದ ಹಾಡುಗಾರಿಕೆಯೂ ಅಂದರೆ ಯಕ್ಷಗಾನದ ಗಾನ ವೈವಿಧ್ಯವೇ ಜನರಿಗೆ ಸಂತೋಷದ ಸಂಗತಿಗಳಾಗಿರುವುದರಿಂದ ಯಕ್ಷಗಾನದ ರೂಪಾಂತರಕ್ಕೆ ಮರುಚಿಂತನೆ ತೀರಾ ಅಗತ್ಯ ಎಂದು ಸಾಮಗ ಅವರು ಹೇಳಿದರು.

ಸಂಘದ ಗೌರವಾಧ್ಯಕ್ಷ ದಯಾನಂದ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಅಭಿಮನ್ಯು ಕಾಳಗ, ಸೈಂಧವ ವಧೆ, ರತಿ ಕಲ್ಯಾಣ ಪ್ರಸಂಗಗಳ ಪ್ರದರ್ಶನ ನಡೆಯಿತು.

# ಮಾತು ಮತ್ತು ಧ್ವನಿಯೇ ಬಾನುಲಿ ನಾಟಕದ ಜೀವಾಳ

## -ಯಮುನಾ ಮೂರ್ತಿ

'ಕಾವ್ಯೇಶು ನಾಟಕಂ ರಮ್ಯಂ' ಎನ್ನುತ್ತಾರೆ. ಸಾಹಿತ್ಯ ಪ್ರಕಾರಗಳಲ್ಲಿ ನಾಟಕ ಅತ್ಯಂತ ರಂಜನೀಯ. ದೃಶ್ಯವನ್ನು ಶ್ರವ್ಯವಾಗಿ ಮಾರ್ಪಡಿಸದಿದ್ದರೆ, ದೃಶ್ಯ ದೃಶ್ಯವಾಗಿದ್ದರೆ ಬಾನುಲಿ ನಾಟಕವಾಗುವುದಿಲ್ಲ. ಇಲ್ಲಿ ದೃಶ್ಯವನ್ನೆಲ್ಲಾ ಶ್ರಾವ್ಯ ರೂಪಕ್ಕೆ ಪರಿವರ್ತಿಸಬೇಕಾಗುತ್ತದೆ. ಕಣ್ಣಿಗೆ ಕಾಣಿಸುವುದನ್ನು ಶ್ರವಣದ ಮೂಲಕ, ಮನಸ್ಸಿನ ಆಳಕ್ಕೊಗಿ, ಮನಸ್ಸಿನ ರಂಗದ ಮೇಲೆ ಪಾತ್ರಗಳು ಅಭಿನಯಸಬೇಕಾದರೆ ಆ ಸಮಯಕ್ಕೆ ದೃಶ್ಯ ಧ್ವನಿಯಾಗಿ ಪರಿವರ್ತನೆಗೊಳ್ಳುವಾಗ ಬಹಳಷ್ಟು ಗಮನಿಸಬೇಕಾಗುತ್ತದೆ. ರಂಗಭೂಮಿಯ ನಾಟಕ ಪ್ರೇಕ್ಷಕರಿಗೋಸ್ಕರ. ಅದು ದೃಶ್ಯ-ಕಾವ್ಯ. ಬಾನುಲಿ ನಾಟಕ ಶ್ರೋತೃಗಳಿಗಾಗಿ. ರಂಗನಾಟಕದಲ್ಲಿ ದೃಶ್ಯ, ರೇಡಿಯೋ ನಾಟಕದಲ್ಲಿ ಶ್ರವ್ಯ.ಪಾತ್ರಗಳ ವಯಸ್ಸು, ಪ್ರದೇಶ, ಪರಿಸರ, ಸನ್ನಿವೇಶಕ್ಕೂ ಸಂಭಾಷಣೆಯೇ ಮೂಲ. ಒಂದು ಶಬ್ದವನ್ನು ವಿವಿಧ ರೂಪದಲ್ಲಿ ಹೇಳಬಹುದು. ಮಾತು ಮತ್ತು ಧ್ವನಿಯೇ ಬಾನುಲಿ ನಾಟಕದ ಜೀವಾಳ ಎಂದು ರಂಗಭೂಮಿ, ಕಿರುತೆರೆ, ಸಿನಿಮಾ, ಬರಹಗಾರರೂ ಆದ ಶ್ರೀಮತಿ ಯಮುನಾ ಮೂರ್ತಿಯವರು ಹೇಳಿದ್ದಾರೆ. ಅವರು ದಿನಾಂಕ 03.01.2021ರಂದು ದೆಹಲಿ 'ದಿನಕರ' ತಂಡ ನಿಸ್ತಂತು ಮಾಧ್ಯಮದ ಮೂಲಕ ಹಮ್ಮಿಕೊಂಡಿದ್ದ 'ರೇಡಿಯೋ ನಾಟಕ' ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಕಾದಂಬರಿ, ಸಿನಿಮಾ, ಬಾನುಲಿ ನಾಟಕ, ರಂಗನಾಟಕ ಇವುಗಳ ಮುಖ್ಯ ಉದ್ದೇಶ ಕಥೆ ಹೇಳುವುದು. ಕಾದಂಬರಿ ಪದದ ಮೂಲಕ, ಸಿನಿಮಾ ಕ್ಯಾಮರಾ ಮೂಲಕ, ರಂಗನಾಟಕಗಳು ಪ್ರೇಕ್ಷಕರ ಎದುರಿಗೆ ಕಲಾವಿದರ ಅಭಿನಯದ ಮೂಲಕ, ಬಾನುಲಿ ನಾಟಕ ಬರೀ ಧ್ವನಿಯಿಂದ ಹೇಳಿಸುತ್ತದೆ. ಒಂದಕ್ಕೊಂದು ಬಹಳ ವ್ಯತ್ಯಾಸವಿದೆ. ಆದರೆ, ಇವುಗಳ ಒಟ್ಟು ಉದ್ದೇಶ ಕಥೆ ಹೇಳುವುದು ಎಂದು ಅಭಿಪ್ರಾಯಪಟ್ಟರು.

ದೃಶ್ಯ ನಾಟಕ ಕಣ್ಣಿಗೆ ಕಾಣಿಸುತ್ತದೆ. ರೇಡಿಯೋ ಸಾಧನ ಹೊರತುಪಡಿಸಿ, ಬೇರೇನು ಕಾಣಿಸುವುದಿಲ್ಲ. ಯಾವುದೇ ಪಾತ್ರಗಳನ್ನು ಸೃಷ್ಟಿ ಮಾಡಿದರೂ ಕೂಡ ಪರಕಾಯ ಪ್ರವೇಶ, ಪರಧ್ವನಿ ಪ್ರವೇಶ-ಧ್ವನಿಯ ಮೂಲಕ ಪಾತ್ರಗಳ ಸೃಷ್ಟಿ ಆಗಬೇಕು. ರಂಗಭೂಮಿಯಲ್ಲಿ ಪ್ರತಿಕ್ರಿಯೆ ಸನ್ನಿವೇಶಕ್ಕನ್ನುಸರಿಸಿ ಬೇರೆ-ಬೇರೆಯಾಗಿರುತ್ತದೆ. ಉದಾ: ದುಃಖ, ಹಾಸ್ಯ ಸನ್ನಿವೇಶ ಇತ್ಯಾದಿ. ಬಾನುಲಿ ನಾಟಕ ಸಮೂಹ ಮಾಧ್ಯಮ. ಧ್ವನಿ ಗ್ರಹಿಕೆಯ ಕಲ್ಪನಾಶಕ್ತಿಯ ಮೇಲೆ ಚಿತ್ತ ಸ್ಮೃತಿಪಟಲದಲ್ಲಿ ಚಿತ್ತರಗೊಳ್ಳುತ್ತದೆ. ರಂಗಮಂಟಪ



ಯಮುನಾ ಮೂರ್ತಿ

ಇರುವುದಿಲ್ಲ. ಒಳಮನಸ್ಸಿನ ಒಳಗಡೆ ರಂಗಮಂಟಪ, ಮನಃಪಟಲದ ಮೇಲೆ ನಾಟಕ ಮಾಡಬೇಕಾಗುತ್ತದೆ. ವೇಷಭೂಷಣವಿಲ್ಲ. ಪ್ರಸಾದನ ಪರಿಕರಗಳ ಅವಶ್ಯಕತೆ ಇಲ್ಲ. ರಂಗಸಜ್ಜಿಕೆಯೂ ಬೇಡ, ಕೇವಲ ಮೈಕ್ ಮುಂದೆ ನಿಂತು ನಾಟಕ ಅಭಿನಯಸಬೇಕಾಗುತ್ತದೆ. ರಂಗನಾಟಕ, ಕಿರುತೆರೆ, ಸಿನಿಮಾ, ಬೀದಿನಾಟಕಗಳಿಗೂ ಬಾನುಲಿ ನಾಟಕಕ್ಕೂ ತುಂಬಾ ವ್ಯತ್ಯಾಸವಿದೆ ಎಂದರು.

ನಿರೂಪಣಾ ವಾಕ್ಯಗಳ ಬಳಕೆಯಾಗಬೇಕು. ರೇಡಿಯೋ ನಾಟಕದಲ್ಲಿ ಪ್ರತಿ ಶಬ್ದ, ಪ್ರತಿ ಸಂಭಾಷಣೆ ಯಾವ ಪಾತ್ರ ಮಾತಾಡುತ್ತಿರುತ್ತಾರೆಯೋ ಆ ಪಾತ್ರದ ಕ್ಯಾರೆಕ್ಟರ್ ತಿಳಿದಿರಬೇಕು. ಇದರಲ್ಲಿ ಮುಖ್ಯವಾಗಿ ಊಟಕ್ಕೆ ಕುಳಿತಾಗ ಅನ್ನದಲ್ಲಿ ಕಲ್ಲು ಸಿಗುತ್ತೆ, ಹಾ! ಕಲ್ಲು.. ಎಂದು ಗಂಡ ಪತ್ನಿಗೆ ಹೇಳಿದರೆ, ಅಯ್ಯೋ.. ಯಾವಾಗ್ಲೂ ನಿಮಗ್ಯಾಕ್ರಿ ಕಲ್ಲೇ ಸಿಗುತ್ತೆ, ಅಕ್ಕಿ ಸ್ವಚ್ಛ ಮಾಡಿ ಸಾಕಾಗಿ ಹೋಗಿದೆ. ಹೋಗ್ಲಿ? ಒಂದು ಕನ್ನಡಕ ತಂದು ಕೊಡಿ ಅಂತ ಪದೇ-ಪದೇ ಹೇಳಿದ್ರು ತರೊದೆ ಇಲ್ಲ. ಪತ್ನಿ ಹೇಳಿದಾಗ, ಕೂಡಲೇ ತರ್ತಿನಿ, ಕನ್ನಡಕ ತರದೇ ಇದ್ರೆ ನನ್ನ ಹೊಸ ಹಲ್ಲು ಸೆಟ್ಟು ಗತಿ ಏನಾಗಬೇಕು ಅಂತ ಪತಿ-ಪತ್ನಿ ಮಾತಿನ ತಾತ್ಪರ್ಯ. ಅವರು ವಯಸ್ಸಾದವರು ಅಂತಲೂ ಮತ್ತಿತರ ವಿಷಯ ಶ್ರೋತೃಗಳಿಗೆ ತಿಳಿದುಬರುತ್ತದೆ. ಆ ಸಂದರ್ಭ ಕೇಳುಗರಿಗೆ ಸ್ಪಷ್ಟವಾಗುತ್ತದೆ.

ರಂಗದ ಮೇಲೆ ಸನ್ನಿವೇಶ ಬದಲಾವಣೆ ಬಾನುಲಿ ನಾಟಕದಲ್ಲಿ ಬಹು ಸುಲಭ. ಕಡಿಮೆ ಕಾಲಾವಧಿಯಲ್ಲಿ ಬಾನುಲಿ ನಾಟಕ ಸಿದ್ಧಪಡಿಸಬಹುದು. ನದಿ, ಮರ, ಪೆನ್ನು ಇತ್ಯಾದಿ ಪಾತ್ರಗಳನ್ನಾಗಿಯೂ ಬಾನುಲಿ ನಾಟಕದ ಮೂಲಕ ತರಬಹುದಾಗಿದೆ.

'ನನ್ನನ್ನು ಮುಟ್ಟಬೇಡ' ಬಾನುಲಿ ನಾಟಕ ತಾವೇ ನಿರ್ದೇಶನ ಮಾಡಿ, ಪ್ರಸ್ತುತಪಡಿಸಿ, ಹಿನ್ನೆಲೆಯಾಗಿ ವಾದ್ಯ ಸಂಗಿತವಿಲ್ಲದೇ ಒಂದು ಸನ್ನಿವೇಶದಿಂದ ಇನ್ನೊಂದು ಸನ್ನಿವೇಶಕ್ಕೆ ಧ್ವನಿ ಪ್ರಭಾವದ ಮೂಲಕವೇ ಸಹಸಂಬಂಧಗೊಳಿಸಿದೆ ಎಂದರು. ಬಾನುಲಿ ನಾಟಕದಲ್ಲಿ ಅನೇಕ ರೀತಿಯಿಂದ ಹೊಸ-ಹೊಸ ಪ್ರಯೋಗ ಮಾಡಿದೆ ಎಂದ ಅವರು, ಧಾರವಾಡ ಆಕಾಶವಾಣಿಯಲ್ಲಿ ಕಾರ್ಯ ನಿರ್ವಹಿಸಿರುವುದು ಸಂತೃಪ್ತಿ ಇದೆ ಎಂದರು.

ಸಾಹಿತಿ ಎಸ್.ಎನ್ ಶಿವಸ್ವಾಮಿ ಅವರು ಅನೇಕ ಶುದ್ಧ ಬಾನುಲಿ ನಾಟಕಗಳನ್ನು ರಚಿಸಿದ್ದಾರೆ ಎಂದು ಮೆಲುಕು ಹಾಕಿದರು. ಏಳು ನಿಮಿಷದ 'ಟಿಎನ್‌ಟಿ' ಬಾನುಲಿ ನಾಟಕದ ಕಥೆ ಹೇಳಿದರು.

ಜೀವನ ಅನುಭವದ ಗಣಿ. ವೃತ್ತಿ ಸಂತೃಪ್ತಿ ತಮಗಿದೆ. 'ಋಣ ಮುಕ್ತಳು' ನಾಟಕ ರೇಡಿಯೋ ಮೂಲಕ ಪ್ರಸಾರಗೊಂಡ ನಂತರ ಶ್ರೋತೃಗಳು ಫೋನಿನ ಮೂಲಕ ಮಾತನಾಡಿದ್ದು ಹಾಗೂ ಭಾವುಕರಾದ ಅವರನ್ನು ಸಂತೈಸಿರುವ ಪ್ರಸಂಗದ ಕುರಿತು ವಿವರಿಸಿದರು.ಶ್ರೋತೃಗಳಿಂದಲೂ ಕಲಿತೆ ಎಂದರು.

ಕೋವಿಡ್ ಕಾಲದಲ್ಲೂ ದೆಹಲಿಯ 'ದಿನಕರ' ಫೌಂಡೇಶನ್ ನಡೆಸುತ್ತಿರುವ ಉತ್ಸಾಹಕ್ಕೆ ನೀರೆರೆಯುತ್ತಿರುವ ಶಿವಾನಂದ ಇಂಗಳೇಶ್ವರ ಅಭಿನಂದನಾರ್ಹರು ಎಂದರು.

ವಿಜಯಪುರದ ಶ್ರೀಮತಿ ಕವಿತಾ ಹರೀಶ ಅವರು ದಾಸವರೇಣ್ಯರ ಗೀತೆಯನ್ನು ಪ್ರಸ್ತುತಪಡಿಸಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಬಿ.ಆರ್. ಪೋಲೀಸ್ ಪಾಟೀಲ್ ಅವರು ಸಂವಾದ ಕಾರ್ಯಕ್ರಮವನ್ನು ನಿರ್ವಹಿಸಿದರು. ರಂಗಕರ್ಮಿ ದಿನಕರ ಫೌಂಡೇಶನ್ ಸಂಚಾಲಕ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಆದ ಶಿವಾನಂದ ಇಂಗಳೇಶ್ವರ ಅವರು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ದೆಹಲಿ ವಿಶ್ವವಿದ್ಯಾಲಯದ ಅಭಿಕಲ್ಪ ವಿಭಾಗದ ಮುಖ್ಯಸ್ಥ ಹಾಗೂ ದಿನಕರದ ಸದಸ್ಯ ಪ್ರೊ. ರಂಗನಾಥ ಎಂ. ಸಿಂಗಾರಿ ಅವರು ಕಾರ್ಯಕ್ರಮ ನಿರ್ವಹಿಸಿದರು. ರಮೇಶ ಟಿ.ಎಸ್ ಅವರು ತಾಂತ್ರಿಕ ನಿರ್ವಹಣೆ ಮಾಡಿದರು. ಅಮರೇಶ ವಂದಿಸಿದರು. ಪ್ರೇಕ್ಷಕರು ಪ್ರಶ್ನೆ ಕೇಳಿ ಸಂವಾದವನ್ನು ಅರ್ಥಪೂರ್ಣವಾಗಿಸಿದರು.

***ಅಮರೇಶ ಎಚ್.ಎಸ್.***

# ರಂಗಭೂಮಿಯಲ್ಲಿ ಅಶೋಕ ಬಾದರದಿನ್ನಿ ಕುರಿತ ಸಂವಾದ

ದಿನಾಂಕ 17.01.2021ರಂದು ನವದೆಹಲಿಯ ದಿನಕರ ಫೌಂಡೇಶನ್ ಇವರು ಹಮ್ಮಿಕೊಂಡಿದ್ದ ಹಾಸ್ಯ ನಟ, ನಿರ್ದೇಶಕ ಅಶೋಕ ಬಾದರದಿನ್ನಿ ಅವರ ಜೀವನ ಹಾಗೂ ಸಾಧನೆಗಳ 'ರಂಗಭೂಮಿಯಲ್ಲಿ ಅಶೋಕ ಬಾದರದಿನ್ನಿ' ವಿಷಯದ ಕುರಿತ ಸಂವಾದದಲ್ಲಿ ಇಲಕಲ್‌ನ ಲೇಖಕ ಡಾ. ವಂಶಾಕೃತ ಮಠ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದರು.

ವಿಜಾಪುರದಲ್ಲಿ ಆಚರಿಸುವ ನವರಾತ್ರಿ ಹಾಗೂ ಗಜಾನನ ಉತ್ಸವಗಳು ಪ್ರತಿಭೆಗಳ ಕಲಾಪ್ರೌಢಿಮೆ ಅನಾವರಣಗೊಳ್ಳಲು ಅವಕಾಶವನ್ನೀಯುತ್ತವೆ. ಅಶೋಕ ಬಾದರದಿನ್ನಿ ಅವರು ಗೆಳೆಯರೊಡಗೂಡಿ ರಚಿಸಿ ನಿರ್ದೇಶಿಸಿದ 'ರೇಖಾಗೆ ನಮಸ್ಕಾರ' 'ಕೈಮುಗಿತಿನ್ರೆಪೊ ಕೊಲ್ಬೆಡಿ' ನಾಟಕಗಳ ಪ್ರದರ್ಶನವಾಗಿ ಯಶಸ್ಸು ಕಂಡವು. ಕಲಾ ಮಾಧ್ಯಮ ತಂಡದ ಶ್ರೀನಿವಾಸ ತಾವರಗೇರಿಯವರ ಮಾರ್ಗದರ್ಶನದಲ್ಲಿ ರಂಗಪಯಣ ಇಲ್ಲಿಂದಲೇ ಆರಂಭವಾಯಿತು.

ಚಂದ್ರಶೇಖರ್ ಪಾಟೀಲ್ ಅವರ ಅಪ್ಪ ಮೂರು ಪಾತ್ರಗಳಿರುವ ನಾಟಕದಲ್ಲಿ 30 ಜನ ಕಲಾವಿದರನ್ನೊಳಗೊಂಡ ನಾಟಕ ರಚಿಸಿದ ಇವರ ಸೃಜನಾತ್ಮಕ ಕಲಾತ್ಮತೆಗೆ ಹಿಡಿದ ಕೈಗನ್ನಡಿಯಾಯಿತು.

ವಿಜ್ಞಾನ ಪದವೀಧರರಾಗಿ ಕಲೆಯ ಕಡೆಗೆ ಒಲವು ಹೊಂದಿ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಿಂದ ವ್ಯಾಸಂಗ ಮುಗಿಸಿ ತಾಯ್ನಾಡಿಗೆ ಬಂದ ಮೇಲೆ ರಾಜ್ಯದ ಬೇರೆ-ಬೇರೆ ಜಿಲ್ಲೆಗಳ ಉದ್ದಗಲಕ್ಕೂ ಓಡಾಡಿ ವೈಶಿಷ್ಟ್ಯವಾದ ನಿರ್ದೇಶನ ಮಾಡುವುದರೊಂದಿಗೆ ಹವ್ಯಾಸಿ ರಂಗಭೂಮಿಗೆ ಹೊಳಪನ್ನು ಮತ್ತು ಹೊಸತನ್ನು ತಂದರು. ಅಶೋಕ ಬಾದರದಿನ್ನಿ ಅವರು ಹೆಚ್ಚು ರಂಗಶಿಬಿರ ನಡೆಸಿದರೆಂದೂ, ಅವರನ್ನು 'ರೂಪಕಗಳ ಜನಕ' ಎಂದು ಕರೆಯಲಾಗುತ್ತದೆ ಎಂದು ವಂಶಾಕೃತ ಮಠ ಅವರು ಹೇಳಿದರು.

ಅವರು ಜೀವನವಿಡೀ ಒಂದೆಡೆ ನಿಲ್ಲದ ಅಪರೂಪದ ಪ್ರತಿಭೆ, ಸಮಾಜ ಜೀವಿ.



ಡಾ. ವಂಶಾಕೃತ ಮಠ



ಅಶೋಕ ಬಾದರದಿನ್ನಿ

ಅವರ ಮರುಜನ್ಮ ಕನ್ನಡ ರಂಗಭೂಮಿಯ ಯೋಗಾಯೋಗ, ಅಚನೂರಿನಿಂದ ದೆಹಲಿಗೆ ಬಂದು ರಾಜ್ಯದಲ್ಲೆಲ್ಲಾ ತಿರುಗಾಡಿ ನಾಟಕದಿಂದಲೇ ಬದುಕನ್ನು ಕಟ್ಟಿಕೊಳ್ಳುವ ಅವರು ನಮಗೆಲ್ಲಾ ಸ್ಫೂರ್ತಿ ಎಂದು ತಿಳಿಸಿದರು.

ಗಿರೀಶ್ ಕಾರ್ನಾಡ್ ಅವರ 'ಹಯವದನ' ನಾಟಕದಲ್ಲಿ ದೇವದೂತ ಪಾತ್ರ ನಿರ್ವಹಿಸಿದ್ದರು. ನವದೆಹಲಿಯ ಎನ್.ಎಸ್.ಡಿ. ಯಲ್ಲಿದ್ದಾಗ ಬಿ. ವಿ. ಕಾರಂತರು ಇವರ ಗುರುಗಳಾಗಿದ್ದರು. 1980ರ ದಶಕದಲ್ಲಿ ಬೆಂಗಳೂರಿಗೆ ಆಗಮಿಸಿದ ಸಂದರ್ಭ 'ಬೆನಕ' ತಂಡಕ್ಕೆ 'ಹ್ಯಾಮ್ಲೆಟ್' ನಾಟಕದ ನಿರ್ದೇಶನ ಮಾಡುತ್ತಾರೆ. ಕನ್ನಡ ರಂಗಭೂಮಿಯ ಶಕ್ತಿಯಾದ ಇವರಿಂದ ಮಠಮಾನ್ಯಗಳಿಗೆ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಇವರು ರಂಗಾಸಕ್ತರಿಗೆ ಬೆಳಕಾಗಿದ್ದಾರೆ ಎಂದು ವಂಶಾಕೃತ ಮಠ ಹೇಳಿದರು.

ದಾವಣಗೆರೆಯ ಪ್ರತಿಮಾ ಸಭಾಕ್ಕೆ 'ಸಂಕ್ರಾಂತಿ' ನಾಟಕ ನಿರ್ದೇಶಿಸುತ್ತಾರೆ. ಮಂಡ್ಯದ ಬಿ. ಶಂಕರೇಗೌಡರ ಗೆಳೆಯರ ಬಳಗ ತಂಡದಿಂದ 'ಮೃಚ್ಛಕಟಿಕ' ದೆಹಲಿಯಲ್ಲಿ ಪ್ರದರ್ಶನ ಕಂಡಿತ್ತು ಎಂದು ವಂಶಾಕೃತ ಮಠ ನೆನಪಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡಿ, 1980ರ ದಶಕದಲ್ಲಿ ಅಶೋಕ ಬಾದರದಿನ್ನಿ ಅವರ ರಂಗ ನಿರ್ದೇಶನದ ನಾಟಕಗಳನ್ನು ವೀಕ್ಷಿಸಿರುವುದನ್ನೂ, ಕಲಾ ಕ್ಷೇತ್ರಕ್ಕೆ ಗೆಳೆಯರೊಂದಿಗೆ ಭೇಟಿ ನೀಡುತ್ತಿರುವುದರ ಕುರಿತು ಮೆಲುಕು ಹಾಕಿದರು. ಸಂವಾದ ಕಾರ್ಯಕ್ರಮದ ರೂವಾರಿ ಶಿವಾನಂದ ಇಂಗಳೇಶ್ವರ ಅವರಿಗೆ ಅಭಿನಂದನೆ ಸಲ್ಲಿಸಿದರು.

ಅಶೋಕ ಬಾದರದಿನ್ನಿ ಅವರ ಪರಿವಾರದವರಾದ ಜಯಲಕ್ಷ್ಮೀ ಪಾಟೀಲ್ ಅವರು ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದರು. ಬಾದರದಿನ್ನಿ ಅವರು ತಮ್ಮ ತಂಡಕ್ಕೆ 'ಅಪ್ಪ' ನಾಟಕದ ನಿರ್ದೇಶನ ಮಾಡಿದ್ದು, ಅನಾರೋಗ್ಯದ ಹಿನ್ನೆಲೆ ನಾಟಕ ಪ್ರದರ್ಶನಕ್ಕೆ ಬರದೇ ಇರುವುದು. ನಾಟಕ ಪ್ರದರ್ಶನದ ನಂತರವೂ ಪ್ರೇಕ್ಷಕರು ಬಾದರದಿನ್ನಿಯವರಿಗಾಗಿ ಕಾದು ಕುಳಿತ ಪರಿಯ ವಿವರವನ್ನು ಮನಮುಟ್ಟುವಂತೆ ವಿವರಿಸಿದರು. ಅವರ ನಾಟಕ ಸೃಷ್ಟಿ ಮಾಡುವ ಹಾಗು ನಾಟಕ ಮುರಿದು ಕಟ್ಟುವ ಕಲೆ ಅದ್ಭುತ ಎಂದರು. ಅವರು ಗ್ರಾಮೀಣ ಪ್ರದೇಶಗಳಿಗೂ ಹೋಗಿ ನಾಟಕ ನಿರ್ದೇಶನ ಮಾಡುತ್ತಿದ್ದರು. ಕಡಿಮೆ ವೆಚ್ಚದಲ್ಲಿಯೇ ನಾಟಕ ಪ್ರಯೋಗಕ್ಕೆ ಹೆಚ್ಚು ಆಸ್ಥೆ. ಮಡದಿ ಅನಸೂಯಮ್ಮ ಪತಿಯ ರಂಗ ಕಾಯಕಕ್ಕೆ ಬೆನ್ನೆಲುಬಾಗಿ ನಿಂತು, ಅವರ ಸಾಧನೆಯ ಪಯಣದಲ್ಲಿ ಸಂಸಾರದ ನೊಗ ಹೊತ್ತು ಮುನ್ನಡೆಸಿದ ಸ್ಥಾವರ ಎಂದು ಬಣ್ಣಿಸಿದರು.

ಪ್ರೊ. ರಂಗನಾಥ ಸಿಂಗಾರಿ ರಂಗಗೀತೆ ಪ್ರಸ್ತುತಪಡಿಸಿದರು. ಎ. ಟಿ. ಶ್ರೀನಿವಾಸ ಸಂವಾದ ನಿರೂಪಿಸಿದರು. ಅರವಿಂದ ಬಿಜ್ಜೈ ಸುಲಲಿತ ಪ್ರಶ್ನೆಗಳ ಮೂಲಕ ಸಂವಾದ ನಡೆಸಿಕೊಟ್ಟರು. ಸಂತೋಷ ಉಪಾಧ್ಯಾಯ ವಂದಿಸಿದರು. ಟಿ. ಎಸ್. ರಮೇಶ ತಾಂತ್ರಿಕ ಸಹಾಯ ಮಾಡಿದರು.

***ಅರವಿಂದ ಬಿಜ್ಜೈ***

# ಭಾರತದ ಸಂವಿಧಾನದಲ್ಲಿ ವಚನ ಸಾಹಿತ್ಯದ ಆಶಯಗಳ ಕುರಿತ ಸಂವಾದ

ದೇವರು ಕೂಡ ಕಾಯಕ ಮಾಡದೇ ಬದುಕುವಂತಿಲ್ಲ ಎಂಬುದು ವಚನಕಾರರ ಅಚಲ ನಿಲುವಾಗಿತ್ತು ಎಂದು ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ಹೆಚ್. ಎನ್. ನಾಗಮೋಹನ್‌ದಾಸ್ ಅಭಿಪ್ರಾಯ ಪಟ್ಟರು. ಅವರು ದಿನಾಂಕ 30.01.2021ರಂದು ಅಖಿಲ ಭಾರತ ಶರಣ ಪರಿಷತ್ತು ದೆಹಲಿ ಪ್ರದೇಶ ಘಟಕವು ಏರ್ಪಡಿಸಿದ್ದ ಎರಡನೆಯ ಆನ್‌ಲೈನ್ ಉಪನ್ಯಾಸ ಮಾಲಿಕೆಯಡಿಯಲ್ಲಿ "ಭಾರತದ ಸಂವಿಧಾನದಲ್ಲಿ ವಚನ ಸಾಹಿತ್ಯದ ಆಶಯಗಳು" ಎನ್ನುವ ವಿಷಯವನ್ನು ಕುರಿತು ವಿಚಾರ ಮಂಡನೆ ಮಾಡಿದರು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಉಪನ್ಯಾಸದ ಸಾರಾಂಶ. ಸಂವಿಧಾನದ ರಚನೆಯ ಹಿಂದೆ, ಮಹಾನ್ ದಾರ್ಶನಿಕರ ಸಂದೇಶಗಳು ಅಪಾರ ಪ್ರಭಾವವನ್ನು ಬೀರಿವೆ ಎಂದು ಹೇಳಿದರು.

ಸಂವಿಧಾನದ ಮೂಲಭೂತ ಆಶಯಗಳ ಹಿಂದೆ ಸುಮಾರು 23,500 ವಚನಗಳ ಪ್ರಭಾವ ನಿಚ್ಚಳವಾಗಿದೆ. ಸಂವಿಧಾನದ ಮೂಲಭೂತ ಧಾತುಗಳಾದ ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ಪ್ರಜಾಪ್ರಭುತ್ವದ ತತ್ವಗಳು ಹೇಗೆ ವಚನ ಸಾಹಿತ್ಯದಲ್ಲಿ ಸಹಾ ಸಮ್ಮಿಳಿತವಾಗಿವೆ ಎಂಬುದನ್ನು ಸರಳವಾಗಿ, ಪಾಂಡಿತ್ಯಪೂರ್ಣವಾಗಿ ತಿಳಿಸಿದರು.

ವಚನ ವಾಚನದೊಂದಿಗೆ ಸಂವಿಧಾನದ ವಿಧಿಗಳನ್ನು ತಿಳಿಸುತ್ತ, ಮುಖ್ಯವಾಗಿ ಮಾನವ ಹಕ್ಕುಗಳು ಹೇಗೆ ವಚನ ಮತ್ತು ಸಂವಿಧಾನದದಲ್ಲಿ ಉಲ್ಲಿಖಿತವಾಗಿವೆ ಎಂದು ತಿಳಿಸಿದರು. ಭಾರತದ ಸಂವಿಧಾನದಲ್ಲಿ ಕಳಶ ಪ್ರಾಯವಾಗಿರುವ ಮೂಲಭೂತ ಹಕ್ಕುಗಳು ವಚನ ಸಾಹಿತ್ಯದ ಸಾರವನ್ನು ಹೇಗೆ ಒಳಗೊಂಡಿವೆ ಎಂಬುದನ್ನು ವಿವರಿಸಿದರು. ಸಮಾನತೆ, ಸ್ವಾತಂತ್ರ್ಯ, ದಯೆ-ಧರ್ಮ, ಘನತೆ ಎತ್ತಿ ಹಿಡಿಯುವಿಕೆಗಳು ಹೇಗೆ ವಚನ ಮತ್ತು ಸಂವಿಧಾನದ ಆಶಯದಲ್ಲಿ ಒಳಗೊಂಡಿವೆ ಎಂದು ವಿಶದವಾಗಿ ತಿಳಿಸಿದರು.

ಬಸವಣ್ಣನವರ ಅನುಭವ ಮಂಟಪವನ್ನು ಉಲ್ಲೇಖಿಸಿ, ಜಗತ್ತಿನ ಮೊದಲನೇ ಪ್ರಜಾಪ್ರಭುತ್ವದ ಪ್ರಯೋಗ 12ನೆಯ ಶತಮಾನದಲ್ಲೇ ಆಗಿತ್ತು. ಆ ಆಶಯಗಳು ನಮ್ಮ ಸಂವಿಧಾನದ ರೂಪದಲ್ಲಿ ಮೂಡಿ ಬಂದಿವೆ ಎಂದರು. ಅನುಭವ ಮಂಟಪದಲ್ಲಿ, ಎಲ್ಲ ಜಾತಿ, ವರ್ಗದವರು, ಚರ್ಚಿಸುವ, ಪ್ರಶ್ನಿಸುವ, ವೈಜ್ಞಾನಿಕ ಮನೋಭಾವ ಮೂಡಿಸಿಕೊಳ್ಳುವ, ಭ್ರಷ್ಟಾಚಾರ ವಿರೋಧಿಸಲು ಅನುವು ಮಾಡಿಕೊಟ್ಟಿದ್ದರು.

ಬಸವಾದಿ ಶರಣರ ವಚನಗಳು ಜಾತಿ ಪದ್ಧತಿ, ಅಸ್ಪೃಶ್ಯತೆ, ಅಸಮಾನತೆಯನ್ನು ಹೋಗಲಾಡಿಸಲು ಎಷ್ಟು ಕೊಡುಗೆಗಳನ್ನು ನೀಡಿದೆ ಹಾಗೂ ಅವು ನಮ್ಮ ಸಂವಿಧಾನದಲ್ಲಿ ಹೇಗೆ ಪ್ರತಿಫಲಿತವಾಗಿವೆ ಎಂಬುದನ್ನು ವಿಷದವಾಗಿ ವಿವರಿಸಿದರು. ಸಂವಿಧಾನವು ಸಮಾನತೆಯನ್ನು ಪ್ರತಿಪಾದಿಸುತ್ತಾ, ಧರ್ಮ, ಜಾತಿ, ಲಿಂಗ ಇನ್ನ್ಯಾವುದೇ ರೀತಿಯ ತಾರತಮ್ಯಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಹಾಗೂ, ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಹೇಗೆ ಸಂವಿಧಾನ ಪ್ರತಿಪಾದಿಸಿದೆ ಎಂದು ತಿಳಿಸಿದರು. ವಚನಗಳ ಆಶಯದಂತೆ ರಚಿಸಿದ ಸಂವಿಧಾನದಿಂದಲೇ ಸಮಾಜದಲ್ಲಿ ಇಂದು ಜಾತಿ ಆಧಾರಿತ ವೃತ್ತಿ ಹೇಗೆ ಮರೆಯಾಗುತ್ತಿದೆ ಎಂದು ತಮ್ಮ ಸ್ವಂತ ಉದಾಹರಣೆಯೊಂದಿಗೆ ವಿವರಿಸಿದರು. ತಾವೊಬ್ಬ ರೈತರ ಮಗನಾಗಿ, ನ್ಯಾಯಾಧೀಶರಂತ ಉನ್ನತ ಹುದ್ದೆಗೇರಲು ಸಾಧ್ಯವಾಗಿದ್ದು ಸಂವಿಧಾನದ ಹಿಂದಿರುವ ಈ ಆಶಯಗಳಿಂದಲೇ ಎಂದು ವಿವರಿಸಿದರು.

ಮಹಿಳಾ ಅಸಮಾನತೆ ಹೋಗಲಾಡಿಸಲು ಹೇಗೆ ವಚನ ಸಾಹಿತ್ಯ ಕೊಡುಗೆ ನೀಡಿದೆ ಎಂಬುದನ್ನು ವಿವರಿಸಿ, ಜಗತ್ತಿನಲ್ಲಿ ಸುಮಾರು ಅರ್ಧದಷ್ಟು ಇರುವ ಮಹಿಳೆಯರಿಗೆ ಪ್ರಜಾಪ್ರಭುತ್ವದ ತಳಹದಿಯಾದ ಅನುಭವ ಮಂಟಪದಲ್ಲಿ ಅವಕಾಶವಿತ್ತು. ಈ ಸಂಬಂಧ, ನಮ್ಮ ಸಂವಿಧಾನದಲ್ಲಿ ಮಹಿಳಾ ಸಮಾನತೆಗೆ ಪ್ರಾಶಸ್ತ್ಯ ನೀಡಲಾಗಿದೆ ಎಂದು ತಿಳಿಸಿದರು.

ಶರಣ ಸಾಹಿತ್ಯ ಕಾಯಕ ತತ್ವಕ್ಕೆ ಹೇಗೆ ಪ್ರಾಮುಖ್ಯತೆಯನ್ನು ಕೊಟ್ಟಿದೆ ಎಂಬುದನ್ನು ವಿವರಿಸುತ್ತಾ, ಶರಣ ಸಾಹಿತ್ಯ ದುಡಿಮೆಗೆ ಪ್ರಾಧಾನ್ಯತೆಯನ್ನು ನೀಡಿದೆ. ಪ್ರತಿಯೊಬ್ಬರೂ ದುಡಿಯಬೇಕು, ಪರಾವಲಂಬತೆ ಇರಕೂಡದು. ಹಾಗೇ, ಕಾಯಕಕ್ಕೆ ಸರಿಯಾದ ವೇತನ ಸಿಗಬೇಕು. ತನ್ನ ಅಗತ್ಯಕ್ಕಿಂತ ಅಧಿಕವಾಗಿದ್ದನ್ನು ದಾಸೋಹ ಮಾಡಬೇಕು. ಇದು ಪ್ರತಿಯೊಬ್ಬರ ಕರ್ತವ್ಯ ಎಂದರು. ಈ ಆಶಯಗಳು ಸಂವಿಧಾನದಲ್ಲೂ ಉಲ್ಲೇಖವಾಗಿರುವುದನ್ನು ತಿಳಿಸಿದರು.

ಶರಣರ ಕಲ್ಯಾಣ ರಾಜ್ಯದ ಪರಿಕಲ್ಪನೆ ನಮ್ಮ ಸಂವಿಧಾನದ ಆಶಯವೂ ಆಗಿದ್ದು, ಇದನ್ನು ಕೇಶವಾನಂದ ಭಾರತಿ ಪ್ರಕರಣದಲ್ಲೂ ಉಲ್ಲೇಖಿಸಿ, ಇದು ಸಂವಿಧಾನದ ಮೂಲ ತಳಹದಿಯಾಗಿದೆ ಎಂಬುದನ್ನು ತಿಳಿಸಿದರು. ಕಲ್ಯಾಣ ರಾಜ್ಯದಲ್ಲಿ ಹೇಗೆ ಸರ್ಕಾರಗಳು ಶಿಕ್ಷಣ, ಆರೋಗ್ಯ, ವಸತಿ ಇತ್ಯಾದಿಗಳನ್ನು ಕೊಡುವ ವ್ಯವಸ್ಥೆ ಸಂವಿಧಾನದಲ್ಲಿ ಅಳವಡಿಕೆಯಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಮಾನ್ಯ ರಾಜ್ಯಸಭಾ ಸದಸ್ಯರಾದ ಡಾ. ಎಲ್. ಹನುಮಂತಯ್ಯ ಅವರು ಮಾತನಾಡುತ್ತಾ ಹನ್ನೆರಡನೆಯ ಶತಮಾನದ ಶರಣರ ಚಳುವಳಿಯಲ್ಲಿ ಕುಶಲಕರ್ಮಿಗಳ ಸಂಘಟನೆಮಾಡಿದ ಬಸವಣ್ಣನವರ ನೇತೃತ್ವದಲ್ಲಿ ಅನುಭವ ಮಂಟಪ ಸ್ಥಾಪನೆಯಾಗಿ ಯಶಸ್ವಿಯಾಗಿ ಅದನ್ನಯ ಮುನ್ನಡೆಸಿದ್ದರು.

ಶ್ರೀ ಬಸವೇಶ್ವರರ ಈ ಚಳುವಳಿಯು ಹೊಸ ಸಮಾಜವನ್ನು ಕಟ್ಟುವ ಹಾಗೂ ಆ ಮೂಲಕ ಕಲ್ಯಾಣರಾಜ್ಯದ ಕಲ್ಪನೆಯ ಕಡೆಗೆ ನಡೆಯುವ ದಾರಿ ತೋರಿತು.

ಶರಣ ಮಾದಾರ ಧೂಳಯ್ಯನ ವಚನದಲ್ಲಿ ಅಟ್ಟೆಯ ಚುಚ್ಚುವ ಹುಳಿಯಮೊನೆಯಲ್ಲೂ ಅವನು ಕಂಡ ಶಿವನ ರೂಪ ಮತ್ತು ಯಾಚನೆಯ ಬಗ್ಗೆ ಹೇಳಿದರು .ಇದು ಕಾಯಕದ ಬಗ್ಗೆ ಇರುವ ನಿಷ್ಠೆ ಎಂದರು.

ಅತಿ ಮುಖ್ಯ ಶರಣರು ಹೇಳಿದ್ದು ಧಾರ್ಮಿಕ ಪರಂಪರೆ ಧಾರ್ಮಿಕ ಆಚಾರಣೆಯಲ್ಲ. ಅವರು ಆಧ್ಯಾತ್ಮಿಕ ಚಿಂತನೆ ಆತ್ಮಶೋಧನೆ ಮತ್ತು ವೈಯಕ್ತಿಕ ಉನ್ನತಿಗಾಗಿ ಬೇರೆಯವರ ಉನ್ನತಿಗೆ ಕೆಲಸ ಮಾಡಿದರು. ಚಿಂತನ ಮಂಥನದಿಂದ ಬಂದದ್ದು ಸ್ತ್ರೀಯರಿಗೆ ಸಂವಿಧಾನದಲ್ಲಿ ಸಮಾನತೆ ಎಂದು ಹೇಳಿದರು. ಭಾರತದಲ್ಲಿ ಶಿಕ್ಷಿತರು ಶೇಕಡಾ ಎಂಬತ್ತು ಇದ್ದಾರೆ ಆದರೆ ಅಸಮಾನತೆ ಮಾನಸಿಕವಾಗಿ ತೊಲಗಿಲ್ಲ. ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಆಯ್ಕೆ ಮಾಡುವಾಗ ಶರಣರು ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಾದ ಕನ್ನಡವನ್ನು ವಚನಗಳಲ್ಲಿ ಅಳವಡಿಸಿದ್ದಾರೆ. ಡಾಕ್ಟರ್ ಶರತ್ ಜವಳಿಯವರು ಒಡ್ಡಿದ ಪ್ರಶ್ನೆಗಳಿಗೆ ಉತ್ತರ ನೀಡುತ್ತ ಅವರ ಅನಿಸಿಕೆಗಳನ್ನು ಪ್ರಕಟಿಸಿದ್ದಾರೆ. ಶ್ರೀ ಬಸವೇಶ್ವರರು ಧರ್ಮ ಸುಧಾರಕರು ಹೌದು ಮತ್ತು ಹೊಸ ಧರ್ಮದ ಸಂಸ್ಥಾಪಕರು ಹೌದು ಎಂದು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ .

ವಚನಕಾರರು ಕಂಡ ಕನಸುಗಳು ನಮ್ಮ ಸಂವಿಧಾನದಲ್ಲಿ ಪ್ರತಿಬಿಂಬಿತವಾಗಿವೆ. ಭಾರತದಲ್ಲಿ ಸಾವಿರಾರು ಜಾತಿಗಳು ಇದ್ದು ಅವುಗಳಲ್ಲಿ ಮೇಲು ಕೀಳು ಜಾತಿ ಭೇದ ಪ್ರತಿಯೊಂದು ಸಂದರ್ಭಗಳಲ್ಲಿಯೂ ಕಂಡುಬರುತ್ತದೆ .ಇದನ್ನೆಲ್ಲ ಪ್ರಶ್ನಿಸಿ ವಿಚಾರಿಸಿ ಚಳುವಳಿಯನ್ನು ಶರಣರು ಹೂಡಿದರು. ಕಲ್ಯಾಣ ರಾಜ್ಯ ಎಂದರೆ ಅನ್ನ ವಿದ್ಯಾ ಆರೋಗ್ಯ ಮತ್ತು ಉದ್ಯೋಗ ಕೊಡುವ ಜವಾಬ್ದಾರಿಯನ್ನು ಒಪ್ಪಿಕೊಳ್ಳಬೇಕು. ಶಿವಶರಣರು ದಾನದಲ್ಲಿ ಯಾವ ನಂಬಿಕೆಯೂ ದಾಸೋಹ ಮಾಡಬೇಕು. ಉಳಿದದ್ದರಲ್ಲಿ ದಾಸೋಹ ಮಾಡಬೇಕು ಕಾಯಕವೇ ಕೈಲಾಸ ಎಂದು ಸಾರಿದ್ದಾರೆ.

ಕಾರ್ಯಕ್ರಮದಲ್ಲಿ ಗೌರವ ಉಪಸ್ಥಿತರಾಗಿದ್ದ ಸುಪ್ರೀಂಕೋರ್ಟಿನ ಹಿರಿಯ ನ್ಯಾಯವಾದಿಗಳಾದ ಡಾ. ಶರತ್ ಎಸ್. ಜವಳಿ ಅವರು ಮಾತನಾಡಿ ಶ್ರೀ ಬಸವೇಶ್ವರರು ಬದುಕಿದ್ದ ಕಾಲಾವಧಿ ಮೂವತ್ತಾರು ವರ್ಷಗಳು ಮಾತ್ರ. ಅವರು ಒಂದು ಚಿಕ್ಕ ರಾಜ್ಯದ ಹಣಕಾಸಿನ ಮಂತ್ರಿ, ಭಂಡಾರಿಯಾಗಿದ್ದು ನಿಸ್ವಾರ್ಥ ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಕಾರ್ಯವನ್ನು ನಿರ್ವಹಿಸಿದರು. ಅವರು ಸಾಂಸಾರಿಕರಾಗಿದ್ದುಕೊಂಡೇ ಜನಸಾಮಾನ್ಯರಂತೆ ಜೀವನ ನಡೆಸಿದರು. ಅವರು ಸಾಂಸಾರಿಕ ಜೀವನದ ಬದಿಯಲ್ಲಿ ಇನ್ನೊಂದು ಬದಿಯಲ್ಲಿ ಜನಸಾಮಾನ್ಯರ ಹಿತಕ್ಕಾಗಿ ನಿಸ್ವಾರ್ಥ ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಕಾರ್ಯವನ್ನು ಮಾಡಿದರು.

ಸಮಾಜದಲ್ಲಿನ ವಂಚಿತ ಜನವರ್ಗವು ಅನೇಕ ಬಗೆಯ ಭೇದಭಾವದಿಂದ ತೊಳಲುತ್ತಿದ್ದು, ಅಂತಹ ಜನ ಸಾಮಾನ್ಯರ ಜೀವನವನ್ನು ಉತ್ತಮ

ಗೊಳಿಸಲು ಬೇಕಾದ ರೀತಿ ನೀತಿಗಳನ್ನು ಅನುಭವ ಮಂಟಪದ ಹಾಗೂ ಎಂಬುದಾಗಿ ನಿರಂತರ ಕಲಿಸಿದರು ಎಂಬುವ ಶಿವಶರಣರು ಕಂಡಿದ್ದು ಸಮಾಜದ ಏಕೀಕರಣ. ಆದರೆ ಇಂದಿಗೂ ಸಹ ಸಮಾಜ ಒಂದಾಗಿಲ್ಲ. ದೀನದಲಿತರಿಗೆ ಬಡಬಗ್ಗರಿಗೆ ಸಮಾನತೆ ಇರಲಿಲ್ಲ. ಎಲ್ಲ ಮಾನವರ ಸರಿ ಸಮಾನತೆಗಾಗಿ ಹೋರಾಡಿದವರು. ಮಾನವೀಯ ಹಕ್ಕುಗಳನ್ನು ಎಲ್ಲರಿಗೂ ಸಿಗಬೇಕು ಎಂದು ಸಾರಿದರು. ಅನುಭವ ಮಂಟಪವೆಂಬ ಚಿಂತಕರ ಚಾವಡಿಯಲ್ಲಿ ಇಂತಹ ಅನೇಕ ಸಾಮಾಜಿಕ, ಆರ್ಥಿಕ ವಿಷಯಗಳನ್ನು ಚರ್ಚಿಸಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ವಚನಗಳ ಮೂಲಕ ತಿಳಿಸಿದ್ದಾರೆ ಎಂದರು.

ಬಸವಣ್ಣನವರು ಹೇಳಿರುವ ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ ಇದೇ ಅಂತರಂಗ ಶುದ್ಧಿ ಎಂಬ ವಚನದಲ್ಲಿ ಪ್ರತಿಪಾದಿತವಾಗಿರುವ ಯಾವ ಅಂಶಗಳೂ ಇವತ್ತಿಗೂ ಪಾಲನೆಯಾಗುತ್ತಿಲ್ಲ ಎಂದು ವಿಷಾಧಿಸಿದರು.

ಇದೊಂದು ಅತಿ ಕಷ್ಟವಾದ ವೈಯಕ್ತಿಕ ಸುಧಾರಣೆ. ಆದರೆ ವಚನದಲ್ಲಿ ಹೇಳಿರುವುದು ಅತಿ ಸರಳವಾದ ಮಾರ್ಗ. ಬಸವಣ್ಣನವರು ಅಂದುಕೊಂಡ ಸಿದ್ಧಾಂತಗಳು ಯಾವನ್ನು ಜನರು ಅನುಷ್ಠಾನಕ್ಕೆ ತಂದಿಲ್ಲ ಎಂದರು. ಅವರ ವಚನಗಳಲ್ಲಿ ಕಾಯಕವೇ ಕೈಲಾಸ ಎಂದು ಸಾರಿದ್ದಾರೆ. ಕಾಯಕವೆಂದರೆ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಕಾಯಕ ಮಾಡಬೇಕು.ಕಾಯಕದಿಂದ ಬಂದ ಹೆಚ್ಚು ಹಣವನ್ನ ದಾಸೋಹದಲ್ಲಿ ಉಪಯೋಗಿಸಬೇಕು. ಇದೇ ದೇವನ ಒಲಿಸುವ ಪರಿ ಎಂದು ಹೇಳಿದರು.

ಡಾಕ್ಟರ್ ಶರತ್ ಜವಳಿಯವರು ಅವರ ಭಾಷಣದ ಕೊನೆಯಲ್ಲಿ ತಮಗೆ ಇನ್ನೂ ಕಾಡುತ್ತಿರುವ ಪ್ರಶ್ನೆ ಎಂದರೆ ಬಸವೇಶ್ವರರು ಧರ್ಮ ಸಂಸ್ಥಾಪಕರೋ? ಅಥವಾ ಧರ್ಮ ಸುಧಾರಕರೋ? ಎಂದು ತಮ್ಮ ಪ್ರಶ್ನೆಗೆ ವಿದ್ವಾಂಸರು ಉತ್ತರಿಸಬೇಕೆಂದು ಕೋರಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಚಂದ್ರಶೇಖರ್ ಅವರು ಮಾತನಾಡಿ ಕನ್ನಡದ ಅಸ್ಮಿತೆ ಎಂದೇ ಪರಿಗಣಿತವಾಗಿರುವ ಮಹಾ ಮಾನವತಾವಾದಿ ಬಸವಣ್ಣ ನವರ ನೇತೃತ್ವದಲ್ಲಿ ರೂಪುತಳೆದ ವಚನಸಾಹಿತ್ಯದಲ್ಲಿ ಪ್ರತಿಪಾದಿತವಾಗಿರುವ ವಿಚಾರಗಳು ಶತಮಾನಗಳ ನಂತರವೂ ಜನಮನಗಳನ್ನು ಸೆಳೆಯುತ್ತಿರುವುದಕ್ಕೆ ಕಾರಣ–12ನೇ ಶತಮಾನದ ವಚನಕಾರರರಲ್ಲಿದ್ದ ನುಡಿದಂತೆ ನಡೆದು, ನಡೆ–ನುಡಿ ಒಂದಾಗಿಸಿಕೊಂಡು ಬದುಕುವ ಗುಣ–ಎಂದು ನಾನು ನಂಬಿದ್ದೇನೆ ಎಂದು ಹೇಳಿದರು.

ಈ ರೀತಿ ನಡೆ ನುಡಿಗಳನ್ನು ಒಂದಾಗಿಸಿಕೊಂಡದ್ದರಿಂದಲೇ ವಚನಕಾರರಿಗೆ ಅನುಭವ ಮಂಟಪದಲ್ಲಿ ಕುಳಿತು ಸಮಾಜದ ಅಂಕುಡೊಂಕು, ಅಸಮಾನತೆ, ಅಸ್ಪೃಶ್ಯತೆಗಳೇ ಮೊದಲಾದ ಪಿಡುಗುಗಳನ್ನು ತೊಡೆದುಹಾಕುವ ಬಗೆ ಹೇಗೆಂದು ಪರಸ್ಪರ ಸಂವಾದ ನಡೆಸಿದರು.

ಸಮಸ್ಯೆಗಳನ್ನು ಸಂವಾದಾತ್ಮಕವಾಗಿ ಪರಿಹರಿಸಲು ಮುಂದಾದರು, ಅದರ ಫಲವೇ ವಚನ ಸಂವಿಧಾನ. ವಚನಗಳನ್ನು ಜನಸಾಮಾನ್ಯರ ಭಾಷೆಯಾದ ಕನ್ನಡದಲ್ಲಿ ಬರೆಯುವ ಮೂಲಕ ಜನರಲ್ಲಿ ಮನೆಮಾಡಿದ್ದ ಮೂಢನಂಬಿಕೆ, ಅಂಧಶ್ರದ್ಧೆಗಳನ್ನು ಬೇರು ಸಮೇತ ಕಿತ್ತು ಹಾಕಬಹುದಾದ ಚಿಂತನೆಗಳನ್ನು ನಡೆಸಿದರು. ಆತನ ಕಾಲ ಘಟ್ಟಕ್ಕಾಗಲೇ ಅವರು ಲಿಂಗ, ವರ್ಗ, ಜಾತಿ ಬೇಧ ರಹಿತ ಸಮ ಸಮಾಜ ನಿರ್ಮಾಣದ ಬಗ್ಗೆ ಚರ್ಚೆ ನಡೆಸಿ, ಅದನ್ನು ಸಾಧಿಸಿ ತೋರಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ಕನ್ನಡ ನಾಡು–ನುಡಿಗೆ ಅನನ್ಯವಾದ ಕಾಣ್ಕೆ ನೀಡಿದ ಬಸವಣ್ಣ ವಿಶ್ವ ಶ್ರೇಷ್ಠ ಸಾಂಸ್ಕೃತಿಕ ನಾಯಕ. ಬಸವಣ್ಣನವರ ನೇತೃತ್ವದಲ್ಲಿ ಸ್ಥಾಪನೆಗೊಂಡ ಜಗತ್ತಿನ ಮೊಟ್ಟಮೊದಲ ಸಮಾಜೋ ದಾರ್ಮಿಕ ಸಂಸತ್ ಎಂದು ಪರಿಗಣಿತವಾದ ಅನುಭವ ಮಂಟಪವನ್ನು ಹುಟ್ಟು ಹಾಕಿದ ಸಂದರ್ಭದಲ್ಲಿ ಜಗತ್ತಿನ ಬೇರೆ ಯಾವುದೇ ದೇಶಗಳಲ್ಲಿಯಾಗಲೀ, ಅಥವಾ ಭಾಷೆಗಳಲ್ಲಿಯೇ ಆಗಲೀ ಇಂತಹ ಮಹತ್ವದ ಚಿಂತನೆ ನಡೆದಿರಲಿಲ್ಲ. ಅನುಭವ ಮಂಟಪದಂತಹ ಸಂಸತ್ ಸ್ವರೂಪದ ಪರಿಕಲ್ಪನೆ ಕೂಡ ಪ್ರಪಂಚದ ಯಾವ ದೇಶದ ಜನರ ಮನಸ್ಸುಗಳಲ್ಲಿ ಮೊಳಕೆಯೊಡೆದಿರಲಿಲ್ಲ.

ಹನ್ನೆರಡನೇ ಶತಮಾನದಲ್ಲಿಯೇ ಬಸವೇಶ್ವರರು ಮಹಿಳಾ ಸಬಲೀಕರಣ, ಜಾತ್ಯಾತೀತ ಮತ್ತು ಢಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿಪಾದಿಸಿದರು ಜಗತ್ತಿಗೆ ಪ್ರಜಾಸತ್ತಾತ್ಮಕ ಮಾದರಿಯನ್ನು ತೋರಿಸಿಕೊಟ್ಟರು. ಇಂತಹ ಸೃಜನಾತ್ಮಕ ಚಿಂತನೆ ಕನ್ನಡದಲ್ಲಿ ೯೦೦ವರ್ಷಗಳ ಹಿಂದೆಯೇ ನಡೆದಿತ್ತು ಎನ್ನುವುದು ಕನ್ನಡಿಗರಾದ ನಮಗೆ ಹೆಮ್ಮೆಯ ಸಂಗತಿ.

ಅಲ್ಲದೇ ಆ ಚಿಂತನೆಗಳು ಆಧುನಿಕ ಭಾರತದ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿಕೊಟ್ಟ ಮಹಾನ್ ಚೇತನಗಳು ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ನೇತೃತ್ವದಲ್ಲಿ ಕಡೆದು ರೂಪಿಸಿದ ನಮ್ಮ ಭಾರತದ ಸಂವಿಧಾನದ ಮೇಲೂ ಅಪಾರ ಪ್ರಭಾವ ಬೀರಿವೆ ಎಂಬುದನ್ನು ಇಂದು ವಿಚಾರ ಮಂಡನೆ ಮಾಡಿದ ಜಸ್ಟೀಸ್ ನಾಗಮೋಹನ ದಾಸ್ ಅವರು ನಮಗೆ ತೋರಿಸಿಕೊಟ್ಟಿದ್ದಾರೆ ಎನ್ನುವುದು ಸಂತಸದ ಸಂಗತಿ.

ಇಷ್ಟೊಂದು ಮಹತ್ವದ್ದಾಗಿರುವ ನಮ್ಮ ವಚನಸಾಹಿತ್ಯವನ್ನು ನಮ್ಮ ಇಂದಿನ ಪೀಳಿಗೆಗೆ ಕಲಿಸುವ, ಅವುಗಳ ಸಂದೇಶವನ್ನು ಕನ್ನಡದ ಹೊಸ ಪೀಳಿಗೆಗೆ ಹಾಗೂ ಕನ್ನಡೇತರರಿಗೆ ತಲುಪಿಸುವ ಕೆಲಸವನ್ನು ಮಾಡಲು ನಮ್ಮ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಪ್ರದೇಶ ಘಟಕ ಶ್ರಮಿಸುತ್ತಿದ್ದು ತಾವೆಲ್ಲರೂ ನಮ್ಮನಜೊತೆ ಕೈಜೋಡಿಸಬೇಕೆಂದು ಎಲ್ಲರಲ್ಲೂ ಮನವಿ ಮಾಡಿದರು.

ಧಾರವಾಡದವರಾದ ಕುಮಾರಿ ಶ್ರದ್ಧಾ ಮೂರ್ಶಿಳ್ಳಿ ಅವರ ಇಂಪಾದ ವಚನ ಗಾಯನದೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ದೆಹಲಿಯ ಮಕ್ಕಳಾದ ಓಂಕಾರೇಶ್ವರ ಸ್ವರೂಪ್, ಸಮರ್ಥ್ ಸಂಗೊಂದಿಮಠ, ಮಾಣಿಕ್ಯೇಶ್ವರಿ ಬಿ. ಹಿರೇಮಠ್, ಅವನಿ ನೆಲ್ಲಿ, ಸಿ.ಬಿ. ನಿಟಿಲಾಕ್ಷ್, ಶ್ರೇಷ್ಠ ತೇಲಿ, ಹಾಗೂ ಬೆಂಗಳೂರಿನ ಪಾವನಿ ಭಾರದ್ವಾಜ್ ಅವರು ಬಹಳ ಮನೋಜ್ಞವಾಗಿ ವಚನಗಳನ್ನು ಹಾಡಿದರು.


ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಾನಪದ ವಿದ್ವಾಂಸರಾಸ ಡಾ. ಪುರುಷೋತ್ತಮ ಬಿಳಿಮಲೆ, ಪ್ರೊ. ಜಯಕುಮಾರ್ ಉಪಾಧ್ಯೆ, ಡಾ.ಎಸ್. ಗುರುಪ್ರಸಾದ್, ಡಾ. ಎಸ್.ಆರ್. ಕಂಟೀಕರ್, ಚಿಂತಕ ಡಾ. ವಡ್ಡಗೆರೆ ನಾಗರಾಜಯ್ಯ ಮೊದಲಾದ ವರು ಕಾರ್ಯಕ್ರಮದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ವಚನ ಮಂಟಪ ವೇದಿಕೆ ಮಸ್ಕತ್ ಇವರ ತಾಂತ್ರಿಕ ಸಹಯೋಗದಿಂದ ಅಂತರ್ಜಾಲದಲ್ಲಿ ಬಹಳ ಚೆನ್ನಾಗಿ ಹಾಗೂ ಅರ್ಥಬದ್ಧವಾಗಿ ಮೂಡಿ ಬಂದಿತು.

ಕಾರ್ಯಕ್ರಮದ ನಿರೂಪಣೆ ಮಾಡಲು ಆಭಾಶಸಾಪ ದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿ ಡಾ. ಗುರುರಾಜ್ ಸಂಗೊಂದಿಮಠ, ಸ್ವಾಗತ ಕೋರಲು ಕೆ.ಎಸ್ ಮೂರ್ತಿ, ಕಾರ್ಯದರ್ಶಿ, ವಂದನಾರ್ಪಣೆ ಮಾಡಲು ಕದಳಿ ಮಹಿಳಾ ವೇದಿಕೆ ಸಂಚಾಲಕಿ ಶ್ರೀಮತಿ ಜಯಶ್ರೀ ಬಸವರಾಜು, ಅತಿಥಿ ಗಣ್ಯರುಗಳನ್ನು ಪರಿಚಯಿಸಲು ಪದಾಧಿಕಾರಿಗಳಾದ ಶ್ರೀಮತಿ ಅರುಣಾ ವೀರಭದ್ರಪ್ಪ ಶ್ರೀಮತಿ ಮೈಥಿಲಿ ಅತ್ತಾವರ್, ಶ್ರೀಮತಿ ದೀನಾ ಜಾಯ್ಸ್, ಶ್ರೀ ಈಶ್ವರ ಲಿಂಗ ಆರೇರಾ ನೆರವಾದರು.

***ಶ್ರೀಮತಿ ಅರುಣಾ ವೀರಭದ್ರಪ್ಪ***

## ಎಸ್.ಎಲ್. ಶ್ರೀನಿವಾಸ ನಿಧನ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಎಸ್.ಎಲ್. ಶ್ರೀನಿವಾಸ ದಿನಾಂಕ 25.01.2021ರಂದು ನಿಧನರಾಗಿದ್ದಾರೆ.

ಅವರು ಲಜಪತ್‌ನಗರದ ಕೇರ್ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ವಾಸವಾಗಿದ್ದರು. ಅವರ ಧರ್ಮಪತ್ನಿ ಲಲಿತಾ ಶ್ರೀನಿವಾಸ್ ದೆಹಲಿ ಕರ್ನಾಟಕ ಸಂಘ ಮತ್ತು ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಚಟುವಟಿಕೆಗಳಲ್ಲಿ ತುಂಬಾ ಸಕ್ರಿಯರಾಗಿದ್ದರು.

ಅಗಲಿದ ಶ್ರೀನಿವಾಸ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ಧವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Feb-2021, Vol. No.31, Issue No. 5, Price Rs.1/-
RNI Regn. No. 53405/91, DL-SW-1/4016/19-21
Date of Publication : Feb 8th / 9th, Posting Date : 10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y



ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ
ಇರುವ ಕಲಾವಿದ ಜಿ.ಎಸ್. ಪಾಟೀಲ್ ಅವರ ಕಲಾಕೃತಿ